ಒಂದಾಣೆ ಮಾಲೆ. 83

ಬೆಡಗಿನ ನಾಡು-ಕೊಡಗು



ಕೊಡಗಿನ ಹುಡುಗಿಯರು — ತಮ್ಮ ರಾಷ್ಟ್ರೀಯ ಪೋಷಾಕಿನಲ್ಲಿ.

ಲೇಖಕರು:
ಶ್ರೀ। ಶ್ರೀಪತಿರಾವ್ ಪಲಿಮಾರ್ಕರ್, ಬಿ. ಎ., ಬಿ. ಟಿ.,
ಹಾತೂರು (ದ. ಕೊಡಗು)

1956 ಬೆಲೆ: ಒಂದಾಣೆ.

ಒಂದಾಣೆ ಮಾಲೆ — ಮಂಗಳೂರು.

'ಒಂದಾಣೆ ಮಾಲೆ'ಯ ಪ್ರಕಟಣೆಗಳು:

೧ *ಕೆಪ್ಪಟಿರಾಯ; ೨ *ನಾರೀಶ್ವರರು; ೩ ಕಳ್ಳನಿಗೆ ಸಂಭಾವನೆ (ದ್ವಿ. ಮುದ್ರಣ ೪ *ಸದ್ರಿಸುಬ್ಬ; ೫ ಅದ್ಭುತ ತ್ಯಾಗ (ದ್ವಿ. ಮುದ್ರಣ); ೬ *ಚುನಾವಣೆ ಅರ್ಥಾತ್ ಬನಾವಣೆ; ೭ *ಬೀಡಿ ಸೇದಬೇಡಿ ಮತ್ತು ಆ ಮಗು; ೮ *ಇಂಗ್ಲಿಷ್–ಕನ್ನಡ ಅರ್ಥಕೋಶ; ೯ ಲಂಚಕ್ಕೆ ಸಂಚಕಾರ (ದ್ವಿ.ಮುದ್ರಣ); ೧೦ *ಟಿಶ್ಯೂ ಔಷಧಿಗಳ ಕೈಪಿಡಿ; ೧೧ ಶ್ರೀ ಕ್ಷೇತ್ರ ಧರ್ಮಸ್ಥಳ (ತೃ. ಮುದ್ರಣ); ೧೨ ಜೀವದ ಮೌಲ್ಯ ಮತ್ತು ಇತರ ಕಥೆಗಳು; ೧೩ ಸತ್ತವನ ಸೇಡು ಮತ್ತು ಇತರ ಕಥೆಗಳು; ೧೪ *ವೆಂಕಟನ ಸಂಕಟ; ೧೫ ಬಾಬಿಗೆ ಬಾಸಿಂಗ (ದ್ವಿ.ಮುದ್ರಣ); ೧೬ ವೇಣೂರಿನ ಗತವೈಭವ(ದ್ವಿ. ಮುದ್ರಣ); ೧೭ ಒಗಟುಗಳು (ದ್ವಿ. ಮುದ್ರಣ); ೧೮ ಜಗಳಗಂಟಿ ಮತ್ತು ಇತರ ಕಥೆಗಳು; ೧೯ ರಥೋತ್ಸವ; ೨೦ ಕರಿನಾಯಿ ಮತ್ತು ಮುಪ್ಪು; ೨೧ ಭಾರತದ ಮಹಾನಗರ–I(ದ್ವಿ.ಮುದ್ರಣ); ೨೨ ತಿರುಕ್ಕುರಲ್ (ದ್ವಿ.ಮುದ್ರಣ); ೨೩ ಸೂರ್ಯನ ಸಂಸಾರ; ೨೪ ಭಾರತದ ಮಹಾನಗರ-II (ದ್ವಿ.ಮುದ್ರಣ); ೨೫ ಧೈರ್ಯ ಮತ್ತು ಇತರ ಸತ್ಯಕಥೆಗಳು; ೨೬ ಮಾಂಗಾವತಾರ(ದ್ವಿ. ಮುದ್ರಣ); ೨೭ ಹಾಸವಿಲಾಸ; ೨೮ *ಸತ್ಯವಂತ ಬಾಬಿ; ೨೯ ಜಾಣ್ಮೆಯ ಒಗಟುಗಳು ೩೦ ಜಾತಕ ಕಥೆಗಳು; ೩೧ ಕಾರ್ಕಳದ ಚರಿತ್ರೆ; ೩೨ ಮರ್ಜಿ; ೩೩ ದರ್ಶನದ ಕಥೆಗಳು; ೩೪ ಅಳುವಿನ ಹೊಳೆ ಮತ್ತು ಕೇಶವಭೂಪ; ೩೫ ಶರಾಬಿನ ಸಿಪಾಯಿಗಳು; ೩೬ ಉಪದೇಶ ಶತಕ; ೩೭ ನಿಮಗೆ ಗೊತ್ತಿದೆಯೇ?; ೩೮ ಚತುರ ಚಮತ್ಕಾರ; ೩೯ ಸತೀ ಸಾವಿತ್ರಿ; ೪೦ ಆಭರಣಗಳ ಪೆಟ್ಟಿಗೆ ಮತ್ತು ಇತರ ಕಥೆಗಳು; ೪೧ ಭಾರತದ ಮಂತ್ರಿಮಂಡಲಗಳು (ದ್ವಿ.ಮುದ್ರಣ); ೪೨ ಕಾಲುಬಳೆಯ ಕಥೆ; ೪೩ ಭಾರತದ ನಾಲ್ಕು ಕಲಶಗಳು; ೪೪ ವ್ಯಸನದಿಂದ ಲಾಭ ಮತ್ತು ಇತರ ಕಥೆಗಳು; ೪೫ ಸುಭಾಷಿತ; ೪೬ ೧೮೫೭ರ ಸಿಪಾಯಿದಂಗೆ; ೪೭ ಅಕಾಂಡ ತಾಂಡವ; ೪೮ ಸಾಹಸದ ಕಥೆಗಳು; ೪೯ ಸಂಜ್ಞಾ ಜ್ಞಾನಕೋಶ; ೫೦ ಪಂಡಿತನ ಪಿಟಿಲು; ೫೧ ಭೋಗಯಾತ್ರೆ; ೫೨ ಸಂಗ್ರಾಮಸಿಂಹ; ೫೩ ಧರ್ಮಶಿಕ್ಷೆ; ೫೪ ಮಹಾತ್ಮ; ೫೫ ಮೀರಾಬಾಯಿ; ೫೬ ವೀರರಮಣಿ ಕರ್ಮದೇವಿ. ೫೭ ಅರಳಿದ ನಗು; ೫೮ ಸಚಿತ್ರ ಜಪಾನ್; ೫೯ ಚುಟ್ಟಬಿಟ್ಟಿಧಿಟ್ಟಿ; ೬೦ ನಿರಪರಾಧಿ; ೬೧ ಭಕ್ತವಾಣಿ; ೬೨ ಜಾನಪದ ಸಾಹಿತ್ಯ; ೬೩ ಡಾಕ್ಟರ್ ಆರೋಗ್ಯವರ್; ೬೪ ಲೌಕಿಕ ನ್ಯಾಯಗಳು; ೬೫ ಶಿಶುಪಾಲ ಮಾನಭಂಗ; ೬೬ ಜರಾಸಂಧ ವಧೆ; ೬೭ ಜವಾಹರಲಾಲರ ಜೀವನ ಚರಿತ್ರೆ; ೬೮ ಕರುಣೆ ಮತ್ತು ಇತರ ಕಥೆಗಳು; ೬೯ ಶ್ರೀಕ್ಷೇತ್ರ ಉಡುಪಿ; ೭೦ ವಿನೋದ ವಿಹಾರ; ೭೧ ಭಾರತದ ಗತವೈಭವ; ೭೨ ಸತ್ಯ ಹರಿಶ್ಚಂದ್ರ; ೭೩ ಸೂಕ್ತಿಗಳು; ೭೪ ಉ. ಕ. ದ ಯಕ್ಷಗಾನ ಕಲಾವಿದರು; ೭೫ ದೇವರ ಸಾಮ್ರಾಜ್ಯದಲ್ಲಿ...; ೭೬ ಕ್ರಾಂತಿಕಂಠೀರವ ಭಗತ್‌ಸಿಂಘ ; ೭೭ ಜಾತಕಪಠನ ಮತ್ತು ಇತರ ಕಥೆಗಳು; ೭೮ ಅಮೃತವಾಣಿ; ೭೯ ಮಾಯಾಮೃಗ; ೮೦ ಡಾಕ್ಟರ್ ಗಾಂಧೀಜಿ; ೮೧ ಆದಿಶ್ರೀ ಶಂಕರಾಚಾರ್ಯರ ಜೀವನ ಚರಿತ್ರೆ; ೮೨ ಆದಿಶ್ರೀ ಶಂಕರಾಚಾರ್ಯ ವಿರಚಿತ ಸ್ತೋತ್ರಗಳು (ಅರ್ಥ ಸಹಿತ); ೮೩ ಬೆಡಗಿನ ನಾಡು ಕೊಡಗು;

*ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ, ಮಂಗಳೂರು-೧.

ಈ ಪುಸ್ತಕದಲ್ಲಿ ಪ್ರಕಟವಾಗಿರುವ ಪಡಿಯಚ್ಚುಗಳು, ಕೊಡಗು ಸರಕಾರದ ವಾರ್ತಾ ಇಲಾಖೆಯ ಮುಖ್ಯಾಧಿಕಾರಿ ಶ್ರೀ ಐ. ಸಿ. ಸುಬ್ಬಯ್ಯ, M.A., B.L., ಇವರ ಕೃಪೆಯಿಂದ.

ಪ್ರಕಾಶಕರು.

ಬೆಡಗಿನ ನಾಡು ಕೊಡಗು

ಪ್ರಕೃತಿ ಸೌಂದರ್ಯದ ನೆಲೆವೀಡಾಗಿ "ಕರ್ನಾಟಕದ ಕಾಶ್ಮೀರ"ವೆಂದು ಪ್ರಖ್ಯಾತವಾಗಿರುವ ಪಶ್ಚಿಮ ಘಟ್ಟಗಳ ನಡುವಿನಲ್ಲಿರುವ, 'ಸಿ' ವಿಭಾಗದ ಪುಟ್ಟ ಪ್ರಾಂತ್ಯವೇ, ಬೆಡಗಿನ ನಾಡು—ಕೊಡಗು. ಇಲ್ಲಿಯ ಪ್ರಕೃತಿ ಸೌಂದರ್ಯವು ಯಾವನನ್ನೂ ಬೆರಗುಗೊಳಿಸದಿರದು. ಈ ಪ್ರಾಂತ್ಯವು ವೈಶಾಲ್ಯದಲ್ಲಿ ಕೇವಲ ೧೫೮೬ ಚದರ ಮೈಲುಗಳಷ್ಟಿದೆ. ಉತ್ತರದಿಂದ ದಕ್ಷಿಣಕ್ಕೆ ೬೦ ಮೈಲುಗಳ ಉದ್ದಕ್ಕೂ ಪೂರ್ವದಿಂದ ಪಶ್ಚಿಮಕ್ಕೆ ೪೦ ಮೈಲುಗಳ ಅಗಲಕ್ಕೂ ಚಾಚಿಕೊಂಡಿದೆ. ಗಾತ್ರದಲ್ಲಿ, ಉಳಿದ ಪ್ರಾಂತ್ಯಗಳ ಒಂದು ಜಿಲ್ಲೆಯಷ್ಟು ಕೂಡ ಇಲ್ಲದಿದ್ದರೂ ಈ ನಾಡು ತನ್ನದೇ ಆದ ವೈಶಿಷ್ಟ್ಯಗಳನ್ನು ಕಾಯ್ದುಕೊಂಡು, ಭಾರತದ ಉಳಿದ ಪ್ರಾಂತ್ಯಗಳಿಗೆ ಅನೇಕ ವಿಧದಲ್ಲಿ ಮಾದರಿಯಾಗಿ, ವಿಖ್ಯಾತವಾಗಿದೆ.

ಪ್ರಾಕ್ಕಥನ

ಕಾವೇರಿಪುರಾಣದ ಒಂದು ಕಥೆಯು ಕೊಡಗಿನ ಪ್ರಾಕ್ಕಥನವನ್ನು ಸೂಚಿಸುತ್ತದೆ. ಕೊಡಗಿಗೆ ಪುರಾತನಕಾಲದಲ್ಲಿ ಮತ್ಸ್ಯದೇಶವೆಂಬ ಹೆಸರಿತ್ತು. ಆ ದೇಶದ ರಾಜನಾದ ಸಿದ್ಧಾರ್ಥನ ಪುತ್ರ ಚಂದ್ರವರ್ಮನು ಜಗನ್ನಾಥದಿಂದ ರಾಮೇಶ್ವರದ ವರೆಗೆ ದೇಶಯಾತ್ರೆ ಮಾಡಿ, ಪಾರ್ವತಿಯನ್ನು ಭಕ್ತಿಯಿಂದ ಭಜಿಸಲು, ಅವಳು ಪ್ರತ್ಯಕ್ಷಳಾಗಿ, "ಚಂದ್ರವರ್ಮ, ನಿನಗೆ ನಿನ್ನ ಪತ್ನಿಯಿಂದ ಮಕ್ಕಳು ಹುಟ್ಟಲಾರರು. ಆದುದರಿಂದ ಓರ್ವ ಶೂದ್ರಕನ್ಯೆಯನ್ನು ವಿವಾಹವಾಗು. ಅವಳಿಂದ ಹನ್ನೊಂದು ಮಂದಿ ಮಕ್ಕಳು ಹುಟ್ಟುವರು. ಅವರು ಕ್ಷತ್ರಿಯ ತಂದೆಯ ಮಕ್ಕಳಾದುದರಿಂದ ಶೂದ್ರರೆಂದು ಪರಿಗಣಿಸಲ್ಪಡಲಾರರು. ಅವರು ಚತುರ್ವೇದಗಳನ್ನು ಕಲಿಯಲು ಮಾತ್ರ ಅನರ್ಹರಾಗಿದ್ದು ಉಳಿದೆಲ್ಲ ವಿಷಯಗಳಲ್ಲಿ ಕ್ಷತ್ರಿಯರಂತೆಯೇ ಗೌರವಿಸಲ್ಪಡುವರು. ತಕ್ಕ ಕಾಲದಲ್ಲಿ ನಾನೇ ನಿನ್ನ ರಾಜ್ಯದಲ್ಲಿ ನದಿಯಾಗಿ ಹರಿದು ಪ್ರಜೆಗಳನ್ನು ಹರಸುವೆನು" ಎಂದು ಹೇಳಿ ಅಂತರ್ಧಾನ

ಳಾದಳು! ಪಾರ್ವತಿಯು ಹೇಳಿಕೆಯಂತೆ ಚಂದ್ರವರ್ಮನಿಗೆ ಶೂದ್ರಕನ್ಯೆಯಲ್ಲಿ ಹನ್ನೊಂದು ಮಂದಿ ಮಕ್ಕಳಾದರು. ಅವರಲ್ಲಿ ಮೊದಲನೆಯ ಮಗನೇ ದೇವಕಾಂತನು. ಇವನೇ ಮುಂದೆ ದೇಶದ ರಾಜನಾದನು. ಇವನಿಗೂ ಇವನ ತಮ್ಮಂದಿರಿಗೂ ವಿದರ್ಭ ರಾಜಕುಮಾರಿಯರನ್ನು ತಂದುಕೊಂಡು ವಿವಾಹವಾಯಿತಂತೆ. ಜನಸಂಖ್ಯೆಯು ಹೆಚ್ಚಾಗಲು, ದೇಶದಲ್ಲಿ ವಾಸ ಯೋಗ್ಯವಾದ ಭೂಮಿಯು ಕಡಮೆಯೆಂದು ಕಂಡಾಗ, ದೇವಕಾಂತನ ಪರಿವಾರದವರು ತಮ್ಮ ಬಲವಾದ ಕೈಕಾಲುಗಳ ಉಗುರುಗಳಿಂದ ದೇಶದ ಏರು ತಗ್ಗುಗಳನ್ನು ಸರಿಪಡಿಸಿದರಂತೆ. ಆ ಕಾರಣದಿಂದ ಈ ಮತ್ಸ್ಯ ದೇಶಕ್ಕೆ "ಕ್ರೋಢ" ದೇಶವೆಂದು ಹೆಸರು ಬಂದಿದೆಯೆಂದು ಕಥೆಯಿದೆ.

ದೇವಕಾಂತ ಮತ್ತು ಅವನ ಮುಂದಿನ ಪೀಳಿಗೆಯ ಜನರನ್ನು 'ಉಗ್ರ' ರೆಂದು ಕರೆಯುವ ಸಂಪ್ರದಾಯವು ಬಂತು. ಈಗಿನ ಕೊಡಗು ಪ್ರಾಂತ್ಯಕ್ಕೆ "ಮತ್ಸ್ಯದೇಶ" "ಕ್ರೋಢ ದೇಶ" ಮತ್ತು "ಬ್ರಹ್ಮಕ್ಷೇತ್ರ"ವೆಂದೂ ಹೆಸರುಗಳಿವೆ. ಈಗಿನ 'ಕೊಡಗು' ಎಂಬ ಹೆಸರು "ಕುಡುನಾಡು" ಎಂಬುದರಿಂದ ಬಂದಿರಬೇಕೆಂದು ಹಲವು ತಜ್ಞರ ಅಭಿಪ್ರಾಯ. ಹೊಯ್ಸಳ ಅರಸನಾದ ವೀರಬಲ್ಲಾಳನ ಕಾಲದ ಅಂದರೆ ಕ್ರಿ. ಶ. ೧೧೭೪ನೆಯ ವರ್ಷದ ಒಂದು ಶಾಸನದಲ್ಲಿ "ಕೊಡಗು" ಎಂಬ ಪದವು ಸಿಕ್ಕಿದೆಯಂತೆ.

ಇತಿಹಾಸದ ಪುಟಗಳಿಂದ

ಕೊಡಗನ್ನು ಕದಂಬರು, ಗಂಗರಸರು, ಚೋಳರು, ಚೆಂಗಾಳ್ವರೇ ಮೊದಲಾದ ಅನೇಕ ಮನೆತನದವರು ಆಳಿಕೊಂಡಿದ್ದರೆಂದು ಚರಿತ್ರೆಯಿಂದ ತಿಳಿಯುತ್ತದೆ. ಚೆಂಗಾಳ್ವರ ಪತನವಾದ ಬಳಿಕ ಹಾಲೇರಿ ಮನೆತನದವರು ಕೊಡಗಿನಲ್ಲಿ ರಾಜ್ಯಸ್ಥಾಪನೆಗೈದರು. ಇವರು ವೀರಶೈವರು. ಹಾಲೇರಿ ಅರಸರ ಪರಂಪರೆಯ ಸುಮಾರು ೧೨ ಮಂದಿ ಅರಸರು ೨೫೦ ವರ್ಷಗಳ ಕಾಲ ರಾಜ್ಯಭಾರ ನಡೆಸಿದರಂತೆ. ೧೮ನೇ ಶತಮಾನದಲ್ಲಿ ಕೊಡಗಿನ ಪಟ್ಟದ ಕುರಿತು ಅರಸುಮನೆತನದವರೊಳಗೆ ಅಂತಃಕಲಹವುಂಟಾದಾಗ ಲಿಂಗರಾಜನು ಮೈಸೂರಿನ ಹೈದರಾಲಿಯ ಸಹಾಯದಿಂದ ಎದುರಾಳಿಯಾದ ದೇವಪ್ಪನನ್ನು ಓಡಿಸಿ, ತಾನೇ ಪಟ್ಟವೇರಿದನು. ಆದರೆ, ಮುಂದೆ ಹೈದರಾಲಿಯು, ಲಿಂಗರಾಜನ ಮಗನಾದ ವೀರರಾಜನು ಚಿಕ್ಕಬಾಲಕನೆಂದು

ಹೇಳಿ, ತಾನೇ ಕೊಡಗಿನ ಆಡಳಿತವನ್ನು ವಹಿಸಿದನಲ್ಲದೆ, ರಾಜಮನೆತನದವರನ್ನು ಪೆರಿಯಾ ಪಟ್ಟಣದಲ್ಲಿ ಸೆರೆಯಲ್ಲಿಟ್ಟನು. ವೀರರಾಜನು ಸೆರೆಯಿಂದ ತಪ್ಪಿಸಿಕೊಂಡು ಇಂಗ್ಲೀಷರೊಂದಿಗೆ ಸೇರಿ, ೧೭೯೨ರಲ್ಲಿ ಕೊಡಗಿನ ದೊರೆಯಾದನು. ಆದರೆ, ಕಾರಣಾಂತರಗಳಿಂದ ಆಳ್ವಿಕೆಯು ಪರಿಣಾಮಕಾರಿಯಾಗಿರಲಿಲ್ಲ. ಲಾರ್ಡ್ ವಿಲಿಯಂ ಬೆಂಟಿಂಕನ ಕಾಲದಲ್ಲಿ ಇಂಗ್ಲಿಷರು ರಾಜನಾದ ವೀರರಾಜೇಂದ್ರನನ್ನು ಸೋಲಿಸಿ ೧೮೩೪ರಲ್ಲಿ ಕೊಡಗನ್ನು ತಮ್ಮ ವಶಕ್ಕೆ ತೆಗೆದುಕೊಂಡು ತಾವೇ ಆಳಲಾರಂಭಿಸಿದರು.

ಕೊಡಗಿನ ಹೆಣ್ಣು

ಕೊಡಗಿನ ಕೊಡವ ಹೆಮ್ಮಕ್ಕಳ ಸಾಂಸ್ಕೃತಿಕ ವೈಶಿಷ್ಟ್ಯವು ಅಚ್ಚುಕಟ್ಟಾಗಿ ಅಡಗಿರುವುದು ಅವರು ಧರಿಸುವ ವಿಶಿಷ್ಟವಾದ ಉಡುಪು ಮತ್ತು ತೊಡುಪುಗಳಲ್ಲಿ! ಕೊಡಗಿನ ಹೆಣ್ಣಿನ ವೈಶಿಷ್ಟ್ಯದ ಕುರಿತು ಕೊಡಗಿನ ಕುಮಾರಿಯೇ ಆದ "ಯೋಗಿನಿ"ಯವರು ಬರೆದ ಒಂದು ಲೇಖನದ ಕೆಲ ಅಂಶವನ್ನು ಇಲ್ಲಿ ಉದ್ಧರಿಸಿದರೆ ಅಪ್ರಾಸಂಗಿಕವಾಗಲಾರದು.

"ಅಗಣಿತ ಜಾತಿಗಳ ನೆಲೆಯಾದ ಭಾರತದಲ್ಲಿ ಆಗಂತುಕರಿಬ್ಬರು ಪರಸ್ಪರ ಸಂಧಿಸುವಾಗ ಅಗತ್ಯವಿಲ್ಲದಿದ್ದರೂ ಕೇಳುವ ಮೊದಲ ಪ್ರಶ್ನೆ "ನಿಮ್ಮ ಜಾತಿ?" ಕೊಡಗರ ಹೆಣ್ಣನ್ನು ಅಪರಿಚಿತರು ಸಂಧಿಸುವ ಸಮಯ ಅವಳ ಬಗೆಗೆ ಈ ಒಂದು ಅಸಭ್ಯ ಪ್ರಶ್ನೆಯನ್ನು ಎತ್ತಬೇಕಾದ ಪ್ರಸಂಗವೇ ಬರುವುದಿಲ್ಲ. ಇದಕ್ಕೆ ಕಾರಣ ಆಕೆಯ ಉಡುಗೆತೊಡುಗೆ.

ಕೊಡಗರ ಹೆಣ್ಣು ಬಹುಮಟ್ಟಿಗೆ ಚೆಲುವೆ! ಚೆಲ್ವಿಕೆಗೆ ಸರಿಯಾಗಿ ಅವಳು ವೇಷ-ಭೂಷಣ ಪ್ರಿಯಳಾದ ಆಡಂಬರಿಯೂ ಹೌದು! ಪತಿಯೊಂದಿಗೆ ಜೀವಿಸುವ ಕಾಲದಲ್ಲಿ ಅವಳೆಷ್ಟು ವಿಲಾಸಪ್ರಿಯಳಾಗಿರುತ್ತಾಳೋ, ಪತಿ ಕಣ್ಮುಚ್ಚಿದ ಕ್ಷಣಕ್ಕೆ ಅಷ್ಟೇ ವಿರಕ್ತೆಯಾಗುತ್ತಾಳೆ. ಪುನರ್ವಿವಾಹದ ಅವಕಾಶವಿದ್ದರೂ ಗಂಡನ ಮೇಲಿನ ಪ್ರೇಮ ಮತ್ತು ಮಕ್ಕಳ ಮೇಲಿನ ಮಮತೆಯಿಂದ ವಿಧವೆಯಾಗಿ ಉಳಿಯುವ ಕೊಡಗರ ಹೆಣ್ಣು ಹಣೆಗೆ ಬೊಟ್ಟಿಡಳು, ಒಡವೆಯನ್ನೂ ಧರಿಸಳು, ಮತ್ತು ಸದಾ ಅಚ್ಚಬಿಳಿಯ ಬಟ್ಟೆಯನ್ನೇ ತೊಡುವಳು.

ಕೊಡಗಿತಿಯರ ಉಡುಗೆಯ ಅಚ್ಚುಕಟ್ಟು ಪ್ರಾಯಶಃ ಇನ್ನು ಯಾವ ಹಿಂದೂ ನಾರಿಯ ಉಡುಗೆಯಲ್ಲೂ ಇರಲಾರದೆನಿಸುತ್ತದೆ. ಸತ್ಯಲೋಕದ ಬ್ರಹ್ಮನ ಸಭೆಯಲ್ಲಿ ಗಂಗೆಯ ಸೆರಗು ಕುಳಿತೆಡೆಯಿಂದಲೇ ಜಾರಿ ಬಿದ್ದು ಭಾರತದ ಒಂದು ಬೃಹತ್ ಇತಿಹಾಸಕ್ಕೆ ನಾಂದಿಯಾಯಿತು! ಆದರೆ ಕೊಡಗಿತಿಯರ ಸೀರೆ ಒಮ್ಮೆ

ಉಟ್ಟನಂತರ ಯುದ್ಧದ ಕಳಕ್ಕೆ ಹೋದರೂ ಸರಿ, ತಿರುಗಿ ಬಿಚ್ಚುವ ತನಕ ಕದಲಲಾರದು. ಕೊಡಗಿತಿಯರು ಚೆಲುವೆಯರು ಮಾತ್ರವಲ್ಲ, ಧೈರ್ಯಶಾಲಿನಿಯರೂ ಹೌದು. ಕೊಡಗಿನ ವಿಶಿಷ್ಟ ಸಂಸ್ಕೃತಿ, ಅದರ ಅಚ್ಚುಕಟ್ಟು ಉಳಿಯುವುದು ಕೊಡಗಿತಿಯರ ಭಿನ್ನವಾದ ಉಡುಪು ಮತ್ತು ಅದರ ಅಚ್ಚುಕಟ್ಟನ್ನೇ ಬಹುವಾಗಿ ಹೊಂದಿಕೊಂಡಿದೆ."

"ಕಾವೇರಿ ಕೈಯೆತ್ತಿ ಹರಸಿದ ನಾಡು"—ಕೊಡಗು

ಕೊಡಗರು ಕಾವೇರಿಯನ್ನು ಅನನ್ಯ ಭಕ್ತಿಯಿಂದ ಪೂಜಿಸುತ್ತಾರೆ. ಕೆಲವರು ಮಾತುಮಾತಿಗೂ "ಕಾವೇರಿ ತಾಯಿಯ ದಯೆಯಿಂದ" "ಕಾವೇರಿ ಮಾತೆಯ ಕೃಪೆಯಿಂದ" ಎಂದು ಹೇಳುವುದಿದೆ. ಕೊಡವರಲ್ಲಿ ಹೆಣ್ಣು ಮಕ್ಕಳಿಗೆ "ಕಾವೇರಮ್ಮ"ನೆಂದೂ ಗಂಡು ಮಕ್ಕಳಿಗೆ "ಕಾವೇರಪ್ಪ" (ಕಾರ್ಯಪ್ಪ)ನೆಂದೂ ಹೆಸರಿಡುವುದು ಸರ್ವಸಾಮಾನ್ಯವಾಗಿದೆ.

ಕೊಡಗಿನ ನಗರಗಳಲ್ಲಿ ವ್ಯಾಪಾರೀ ಸಂಸ್ಥೆಗಳಿಗೂ ಕಟ್ಟಡಗಳಿಗೂ 'ಕಾವೇರಿ' ಎಂಬ ಹೆಸರನ್ನು ಉಪಯೋಗಿಸುವುದುಂಟು. ಕೊಡಗಿನ ತಲಕಾವೇರಿಯಲ್ಲಿ ಹುಟ್ಟಿ ಮುಂದೆ ಹರಿದುಹೋಗುವ ಕಾವೇರಿ ನದಿಯಿಂದ ಕೊಡಗು ರಾಜ್ಯಕ್ಕೆ ವಿಶೇಷವಾದ ಪ್ರಯೋಜನವಾಗಿಲ್ಲವಾದರೂ, ಕಾವೇರಿ ನದಿಯ ಮೂಲವಾದ ತಲಕಾವೇರಿ 'ದಕ್ಷಿಣ ಕಾಶಿ'ಯೆಂದು ಪ್ರಸಿದ್ಧಿ ಪಡೆದ ಪುಣ್ಯಕ್ಷೇತ್ರವಾಗಿದೆ.

ದಕ್ಷಿಣ ಭಾರತದ ಅನ್ನಪೂರ್ಣೆ: ಕಾವೇರಿಯು ಕೊಡಗು ರಾಜ್ಯದ ಭಾಗಮಂಡಲದ ಬಳಿ ತಲಕಾವೇರಿಯಲ್ಲಿ ಹುಟ್ಟಿ, ಮುಂದೆ ಮೈಸೂರು ಸಂಸ್ಥಾನವನ್ನು ಹಾದು, ಕೃಷ್ಣರಾಜ ಸಾಗರದಲ್ಲಿ "ಜಲಶ್ರೀ"ಯೆನಿಸಿ ಮುಂದುವರಿದು, ಶಿವಸಮುದ್ರದಲ್ಲಿ ಜಲಪಾತವಾಗಿ ಧುಮುಕಿ, ಮುಂದೆ ಮೆಟ್ಟೂರನ್ನು ಮುಟ್ಟಿ, ಅಲ್ಲಿಂದ ಬಯಲುಸೀಮೆಯಲ್ಲಿ ಹರಿದು ಸಮುದ್ರವನ್ನು ಸೇರಿ, "ದಕ್ಷಿಣ ಭಾರತದ ಅನ್ನಪೂರ್ಣೆ"ಯೆನಿಸಿಕೊಂಡಿದ್ದಾಳೆ. ಕೃಷ್ಣರಾಜ ಸಾಗರದ 'ವೃಂದಾವನ'ದಲ್ಲಿ ಕಾವೇರಿಮಾತೆಯ ಸುಂದರವಾದ ಪ್ರತಿಮೆಯಿದೆ.

ಕವಿಗಳು ಕಂಡ ಕಾವೇರಿ: ಮಹಾ ಸಾಧುಸಂತರೂ ಕವಿಕುಲ ತಿಲಕರೂ ಕಾವೇರಿಯನ್ನು ಹಾಡಿ ಹೊಗಳಿದ್ದಾರೆ. ತಮಿಳಿನಲ್ಲಿ ರಾಮಾಯಣ ಬರೆದ ಕಂಬನ್ ಕವಿಯು ಕಾವೇರಿಯನ್ನು "ಪೊನ್ನಿ"(ಬಂಗಾರ ನದಿ)

ಎಂದು ಕರೆದಿದ್ದಾನೆ. ವಾಲ್ಮೀಕಿ ಮಹಾಕವಿಯು "ಕಾವೇರಿ ನದಿಯಲ್ಲಿ ಅಪ್ಸರೆಯರು ಜಲಕ್ರೀಡೆಯನ್ನಾಡುತ್ತಿದ್ದರು" ಎಂದಿದ್ದಾನೆ. ಸಂಗೀತ ಸಾರ್ವಭೌಮ ತ್ಯಾಗರಾಜನು ಕಾವೇರಿಯನ್ನು ಭಕ್ತಿಯಿಂದ ವರ್ಣಿಸಿದ್ದಾನೆ. ಶ್ರೀ। ಪಂಜೆ, 'ಕುವೆಂಪು', ಡಿ. ವಿ. ಜಿ, ರಾಜರತ್ನಂ—ಇವರು ಕೊಡಗನ್ನು ಕಂಡು ಸ್ಫೂರ್ತಿಗೊಂಡು ರಚಿಸಿದ ಕವನಗಳು ಪ್ರಸಿದ್ಧವಾಗಿವೆ. ಕೊಡಗು ಜಾನಪದ ಗೀತೆಗಳಲ್ಲೂ ಕಾವೇರಿಯ ವರ್ಣನೆಗಳಿವೆ.

ಲೋಪಾಮುದ್ರೆಯೇ ಕಾವೇರಿ: ವೇದದಲ್ಲಿ ಕಾವೇರಿಯ ಕುರಿತಾದ ಶ್ಲೋಕಗಳಿವೆ. "ಸ್ಕಂದಪುರಾಣ"ದ ಒಂದು ಭಾಗವಾದ ಕಾವೇರಿ ಪುರಾಣದಲ್ಲಿ ಕಾವೇರಿಯ ಕಥೆಯು ಸವಿವರವಾಗಿದೆ. ಸುರಾಸುರರು ಅಮೃತಪಾನಕ್ಕಾಗಿ ಹೊಡೆದಾಡಿಕೊಳ್ಳಲಾರಂಭಿಸಿದಾಗ ಶ್ರೀ ವಿಷ್ಣುವು ಮೋಹಿನಿಯ ಅವತಾರವೆತ್ತಿದ ಕಥೆಯಿದೆ. ಅದೇ ಕಾಲಕ್ಕೆ ಪಾರ್ವತಿಯು ಚಿಕ್ಕಬಾಲಿಕೆಯಾಗಿ ಅವತರಿಸಿ ಲೋಪಾಮುದ್ರೆಯೆನಿಸಿಕೊಂಡಳು. ಕೊನೆಗೆ ಬ್ರಹ್ಮನು ಆಕೆಯನ್ನು ತನ್ನ ಪುತ್ರಿಯನ್ನಾಗಿ ಸ್ವೀಕರಿಸಿದನಂತೆ. ಈ ಲೋಪಾಮುದ್ರೆಯೇ ಕಾವೇರಿ.

ಕಾವೇರಿಯ ಕಥೆ: ಪೂರ್ವಕಾಲದಲ್ಲಿ ಕವೇರನೆಂಬ ಒಬ್ಬ ಋಷಿಯು ಬ್ರಹ್ಮದೇಶದ ಪಶ್ಚಿಮದಲ್ಲಿರುವ 'ಬ್ರಹ್ಮಗಿರಿ'ಯಲ್ಲಿ ವಾಸವಾಗಿದ್ದನು. ತನ್ನ ದೈನಂದಿನದ ಕಾರ್ಯಗಳಲ್ಲಿ ನೆರವಾಗಬಲ್ಲ ಓರ್ವ ಕುವರಿಯಿದ್ದರೊಳಿತೆಂದು ಋಷಿಗೆ ಎನಿಸಿತು. ಅವನು ತಪಸ್ಸುಮಾಡಿ ಬ್ರಹ್ಮನನ್ನೊಲಿಸಿ, "ಜನ, ಮನ, ಹೊಲದ ಕೊಳೆ ಕಳೆದು ಕೀರ್ತಿ ತರುವಂಥ ನನ್ನ ಮಗಳಾದ ಲೋಪಾಮುದ್ರೆಯನ್ನೇ ಕಳಿಸಿಕೊಡುವೆನು" ಎಂಬ ವರದಾನ ಪಡೆದನು. (ಋಷಿಯು ತಪಸ್ಸುಮಾಡಿದ ಆ ಸ್ಥಳವನ್ನು ಇಂದೂ "ಬ್ರಹ್ಮಕ್ಷೇತ್ರ"ವೆಂದು ಕರೆವರು) ಲೋಪಾಮುದ್ರೆಯು ಕವೇರನ ಆಶ್ರಮದಲ್ಲಿ 'ಕಾವೇರಿ' ಎಂಬ ಹೆಸರಿನಿಂದ, ಕವೇರನ ಸಾಕುಮಗಳಾಗಿ ಬಳೆಯುತಿದ್ದಳು; ತನ್ನ ಸಾಕು ತಂದೆಗೆ, ಅವನ ವೃದ್ಧಾಪ್ಯದಲ್ಲಿ ನೆರವಾಗುತ್ತಿದ್ದಳು. ಆಶ್ರಮಕ್ಕೆ ಬಂದ ಅತಿಥಿಅಭ್ಯಾಗತರನ್ನೂ ಸಾಧುಸಂತರನ್ನೂ ಸತ್ಕರಿಸುವ ಹೊಣೆಯು ಅವಳದ್ದು. ಇಂಥ ಮಗಳನ್ನು ಪಡೆದ ತಾನು ಧನ್ಯನೆಂದು ಕವೇರ ಮುನಿಯು ಆನಂದದಿಂದಿದ್ದನು.

ಒಂದು ದಿನ ಕವೇರನ ಆಶ್ರಮಕ್ಕೆ ಅಗಸ್ತ್ಯನು ಆಗಮಿಸಿದನು.

ಆದರಾತಿಥ್ಯ ಹೊಂದುತಿದ್ದಾಗ, ಕಾವೇರಿಯು ಕಡೆಗೆ ಆಕರ್ಷಿತನಾಗಿ ತನ್ನನ್ನು ವಿವಾಹವಾಗೆಂದು ಆಕೆಯನ್ನು ಕೇಳಿಕೊಂಡನು. ಅವನು ಬಹಳ ವಾಗ ಕೇಳಿಕೊಂಡ ನಂತರ ಕಾವೇರಿಯು, "ನೀನು ಎಂದಾದರೂ ನನ್ನನ್ನು ಆಗಲಿದ್ದಾದರೆ ನಾನು ಜಲರೂಪಿಯಾಗಿ ಹರಿದುಹೋಗುವೆನು" ಎಂಬ ಮಾತನ್ನು ಶರ್ತವಾಗಿಟ್ಟು, ವಿವಾಹಕ್ಕೊಪ್ಪಿದಳು; ಅಗಸ್ತ್ಯನೂ ಒಪ್ಪಿದನು. ಇಬ್ಬರೂ ಕವೇರನಲ್ಲಿ ತಮ್ಮ ಮನದಿಂಗಿತವನ್ನು ವಿಶದಪಡಿಸಿದರು. ಋಷಿಯು ಸಂತೋಷದಿಂದ ಒಪ್ಪಿಗೆಯನ್ನಿತ್ತು, ಕಾವೇರಿಯನ್ನು ಅಗಸ್ತ್ಯ ನಿಗೆ ಧಾರೆಯೆರೆದುಕೊಟ್ಟನು.

ಅಗಸ್ತ್ಯನು, ತಾನಿತ್ತ ವಚನದಂತೆ, ಪತ್ನಿಯನ್ನು ಅರೆಕ್ಷಣವೂ ಆಗಲಿರದೆ, ಜಾಗರೂಕತೆಯಿಂದ ನಡಕೊಳ್ಳುತಿದ್ದನು. ಹೀಗಿರಲು, ಒಂದು ದಿನ ಮುಂಜಾನೆ ಅಗಸ್ತ್ಯನು, ತನ್ನ ಪತ್ನಿಯು ಎಚ್ಚರಗೊಳ್ಳುವ ಮೊದಲೇ, ತುಸು ದೂರವಿರುವ ಭೃಗಂಡ ಮಹರ್ಷಿಗಳ ಆಶ್ರಮದ ಬಳಿ ಯಿರುವ ಕನ್ನಿಕೆ ತೀರ್ಥದಲ್ಲಿ ಸ್ನಾನಮಾಡಿ ಹಿಂದಿರುಗುವೆನೆಂದು ಹೊರಟು ಹೋದನು. ಆದರೆ, ಅವನು ಹೋದ ಕೆಲಕ್ಷಣಗಳಲ್ಲೆ ಕಾವೇರಿಯು ಎಚ್ಚರ ಗೊಂಡಳು. ಪತಿಯು ಆಶ್ರಮದಲ್ಲಿಲ್ಲದುದನ್ನು ಕಂಡು ದುಃಖಿಸಿದಳು. ತನ್ನ ಪಿತನಾದ ಬ್ರಹ್ಮನ ವಚನವಾದ "ಜನ, ಮನ, ಹೊಲದ ಕೊಳೆ ಕಳೆಯು''ವಂತೆ ಲೋಕೋಪಕಾರಿಯಾಗಬೇಕಾದರೆ ನದಿಯಾಗಿ ಪ್ರವಹಿಸ ಬೇಕೆಂದು ಯೋಚಿಸಿ, ಸ್ಥಿರಚಿತ್ತದಿಂದ ಆಶ್ರಮದ ತೀರ್ಥಕುಂಡಕ್ಕೆ ಹಾರಿ ಹರಿದಳು. ಅಗಸ್ತ್ಯಮುನಿಯ ಶಿಷ್ಯರು ಇದನ್ನು ಕಂಡು ಚಕಿತರಾಗಿ. ಆಕೆಯನ್ನು ಸುತ್ತುಗಟ್ಟಿ, ಮುಂದರಿಯದಂತೆ ತಡೆದರು. ಆದರೆ, ಕಾವೇರಿಯು ತನ್ನ ನಿರ್ಧಾರವನ್ನು ಬದಲಾಯಿಸದೆ, ಯಾರಿಗೂ ಕಾಣದಂತೆ ಗುಪ್ತಗಾಮಿನಿಯಾಗಿ ಮುಂದುವರಿದು, ಸ್ವಲ್ಪ ದೂರದಲ್ಲಿ ಕನ್ನಿಕಾ–ಸುಜ್ಯೋತಿಗಳೆಂಬ ಉಪನದಿಗಳೊಡಗೂಡಿ ತನ್ನ ಪಥವಿಡಿದು ಮುಂದೆ ಪ್ರವಹಿಸಿದಳು.

ಬಲಮುರಿ: ಅಗಸ್ತ್ಯಮುನಿಯು ಹಿಂದಿರುಗಿ ಬಂದು, ತನ್ನ ಆಶ್ರಮ ದಲ್ಲಿ ಕಾವೇರಿಯನ್ನು ಕಾಣದೆ, ಆಕೆಯ ಪ್ರವಾಹಪಥವನ್ನನುಸರಿಸಿ ಹೊರ ಟನು. ಸುಮಾರು ಇಪ್ಪತ್ತಮೂರು ಮೈಲು ದೂರದಲ್ಲಿ 'ಬಲಮುರಿ' ಎಂಬಲ್ಲಿ ಆಕೆಯನ್ನು ಕಂಡು, ಸಂತೈಸಿ, ಮಾತಿಗೆ ತಪ್ಪಿದ ತನ್ನನ್ನು ಕ್ಷಮಿಸಿ

ಹಿಂದಿರುಗಬೇಕೆಂದು ಪ್ರಾರ್ಥಿಸಿಕೊಂಡನು. ಆದರೆ, ಒಮ್ಮೆ ಪ್ರವಾಹ ರೂಪನಲ್ಲಿ ಹೊರಟ ಮೇಲೆ ಇನ್ನು ತಾನು ಹಿಂದೆ ಬರುವಂತಿಲ್ಲವೆಂದು ತಿಳಿಸಿ, 'ಜನ, ಮನ, ಹೊಲದ ಕೊಳೆ ಕಳೆವ' ತನ್ನ ಸದಾಶಯವನ್ನು ತಿಳಿಸಿ, ಅರ್ಧ ಭಾಗ ನದಿಯಾಗಿ ಉಳಿದು, ಇನ್ನು ಅರ್ಧ ಭಾಗ ಪತಿಯೊಡನೆ ಇರುವಂತೆ ತನಗೆ ವರವಿತ್ತು ಹರಸಬೇಕೆಂದು ಪತಿಯನ್ನು ಬೇಡಿಕೊಂಡಳು. ಅಗಸ್ತ್ಯನು ಅವಳ ಇಚ್ಛೆಯಂತೇ ವರವಿತ್ತು ಅವಳು ಮುಂದೆ ಪ್ರವಾಹರೂಪದಲ್ಲಿ ಹರಿದುಕೊಂಡು ಹೋಗಬೇಕಾದ ಪಥವನ್ನೂ ತಿಳಿಸಿದನು.

"ಕ್ರೋಢ": ಕ್ರೋಢ (ಕೊಡಗು) ದೇಶವನ್ನು ಆ ಕಾಲದಲ್ಲಿ ಆಳುತಿದ್ದ ದೇವಕಾಂತನೆಂಬ ಅರಸನು ಸಕಲ ಪ್ರಜಾಪರಿವಾರದಿಂದೊಡಗೂಡಿ ಬಂದು, ಕಾವೇರಿಯು ತನ್ನ ದೇಶವನ್ನು ಬಿಟ್ಟುಹೋಗಬಾರದೆಂದು ಬೇಡಿಕೊಂಡನು. ಕ್ರೋಢದೇಶದ ಪ್ರಜೆಗಳು ಬಲಮುರಿಯಲ್ಲಿ ಭಕ್ತಿಯಿಂದ ಮಿಂದು ಪಾವನರಾದರು. ಪ್ರವಾಹಕ್ಕೆದುರಾಗಿ ಮುಳುಗೇಳುವಾಗ ಕೊಡಗಿತ್ತಿಯರ ಸೀರೆಯ ನೆರಿಗೆಗಳೆಲ್ಲ ಪ್ರವಾಹ ರಭಸದಿಂದ ಹಿಮ್ಮುಖವಾದುವಂತೆ. ಇದನ್ನು ಕಂಡ ಕಾವೇರಿಯು, "ಮಕ್ಕಳೇ! ಮುಂದಕ್ಕೂ ನೀವು ಇದೇ ರೀತಿಯಲ್ಲಿ ಉಟ್ಟುಕೊಂಡರೆ, ನನ್ನ ಪ್ರೀತಿಯ ಮಗಳಂದಿರಾಗಿ ಲೋಕದಲ್ಲಿ ಗುರುತಿಸಲ್ಪಡುವಿರಿ" ಎಂದು ಆಶೀರ್ವದಿಸಿ, ತನ್ನ ರಾಜ್ಯವಾದ ಕೊಡಗು ಎಂದೆಂದೂ ಸುಭಿಕ್ಷದಿಂದ ಬೆಳಗಲಿ— ಸಕಾಲದಲ್ಲಿ ಮಳೆ ಬಂದು ಬೆಳೆಯು ಸಮೃದ್ಧವಾಗಿ ದೇಶದಲ್ಲಿ ಸುಖಶಾಂತಿಗಳು ನೆಲೆಸಲಿ ಎಂದು ಹರಸಿದಳೆಂದೂ ವ್ಯಾಖ್ಯಾನವಿದೆ.

ಕಾವೇರಿ ಸಂಕ್ರಮಣ-ಮತ್ತು ತಲಕಾವೇರಿ ದರ್ಶನ

ತುಲಾಮಾಸದ ಸಂಕ್ರಮಣ ಪುಣ್ಯದಿನದಂದು ಕಾವೇರಿ ನದಿಯ ಮೂಲ ಸ್ಥಳವಾದ ತಲಕಾವೇರಿಯನ್ನು ಸಂದರ್ಶಿಸಿ ಸ್ನಾನ ಮಾಡುವುದಕ್ಕೆ ಭಾರತದಾದ್ಯಂತದಿಂದ ಸಾವಿರಾರು ಜನರು ಬರುತ್ತಾರೆ. ಕೊಡಗರಿಗಂತೂ ಕಾವೇರಿ ಸಂಕ್ರಮಣವು ಬಹು ಪವಿತ್ರವಾದ ದಿನ. ತಲಕಾವೇರಿಯು ಭಾಗಮಂಡಲದಿಂದ ಸುಮಾರು ೩ ಮೈಲು ದೂರದಲ್ಲಿದೆ. ಈ ಬೆಟ್ಟಪ್ರದೇಶವನ್ನು "ಬ್ರಹ್ಮಗಿರಿ" ಎಂದು ಕರೆಯುತ್ತಾರೆ. ತಲಕಾವೇರಿಯಲ್ಲಿರುವ ಪವಿತ್ರವಾದ ಕುಂಡಿಗೆಯಲ್ಲಿ ಪುಣ್ಯಕಾಲದಲ್ಲಿ ಕಾವೇರಿ ತೀರ್ಥೋದ್ಭವವಾಗುವುದು.

ಮಹಾಭಾರತದ ನಾಯಕರಾದ ಪಾಂಡವರು ಈ ಪುಣ್ಯ ಸ್ಥಳಕ್ಕೆ ಬಂದಿದ್ದರೆಂದು ಪ್ರತೀತಿಯಿದೆ. ತಲಕಾವೇರಿಯ ಮಾರ್ಗದಲ್ಲಿ ಒಂದು ಕಡೆ ಇರುವ ದೊಡ್ಡ ಕಲ್ಲನ್ನು "ಭೀಮನ ಕಲ್ಲು" ಎಂದು ಕರೆಯುತ್ತಾರೆ. ತಲ ಕಾವೇರಿಗೆ ಕೆಲವೇ ಫರ್ಲಂಗುಗಳಿವೆಯೆನ್ನುವಾಗ ಸಿಗುವ ಒಂದು ಕಲ್ಲನ್ನು "ಸಲಾಂ ಕಲ್ಲು" ಎನ್ನುತ್ತಾರೆ. ಆ ಕಲ್ಲಿನ ಬಳಿಯಿಂದಲೇ ಟಿಪ್ಪುಸುಲ್ತಾನನು ಕಾವೇರಿಯ ಮಹಾತ್ಮೆಯನ್ನು ತಿಳಿದನೆಂದೂ, ಕೊಡಗು ಕಾವೇರಿ ಮಾತೆಯ ನಾಡೆಂಬುದನ್ನು ತಿಳಿದು ಕೊಡಗಿನ ಸುದ್ದಿಯನ್ನೇ ಬಿಟ್ಟು ಬಿಟ್ಟನೆಂದೂ ಕಥೆಯಿದೆ. ಈಗಲೂ ಯಾತ್ರಿಕರು ತಲಕಾವೇರಿಯಿಂದ ಹಿಂದೆ ಬರುವಾಗ ಈ ಸಲಾಂ ಕಲ್ಲಿನ ಬಳಿಯೊಮ್ಮೆ ನಿಂತು,ಹಿಂದೆ ನೋಡಿ,ಕಾವೇರಿ ಮಾತೆಗೆ ಕೈಮುಗಿದು ಬಳಿಕ ಪ್ರಯಾಣವನ್ನು ಮುಂದುವರಿಸುತ್ತಾರೆ.


ಭಾಗಮಂಡಲ: ಕೊಡಗಿನ ಪಶ್ಚಿಮ ಭಾಗದಲ್ಲಿರುವ ಈ ಚಿಕ್ಕ ಪಟ್ಟಣವನ್ನು "ತ್ರಿವೇಣಿ ಸಂಗಮ"ವೆಂದೂ ಕರೆಯುತ್ತಾರೆ. ಕಾವೇರಿ, ಕನಿಕಾ ಮತ್ತು ಸುಜ್ಯೋತಿಯೆಂಬ ಮೂರು ಪುಣ್ಯ ನದಿಗಳು ಇಲ್ಲಿ ಸಂಗಮವಾಗುತ್ತವೆ. ಆದರೆ ಈಗ ಕಾವೇರಿ ಮತ್ತು ಕನಿಕಾ ನದಿಗಳನ್ನು ಮಾತ್ರ ನಾವು ಕಾಣಬಹುದಾಗಿದೆ. ಸುಜ್ಯೋತಿಯು ಗುಪ್ತಗಾಮಿನಿಯಾಗಿ ಈ "ತ್ರಿವೇಣಿ ಸಂಗಮ"ವನ್ನು ಸೇರುತ್ತಾಳೆಂಬ ಪ್ರತೀತಿಯಿದೆ. ತ್ರಿವೇಣಿ ಸಂಗಮದಲ್ಲಿರುವ ಸ್ನಾನಘಟ್ಟದ ಬಳಿಯಲ್ಲಿ ಚೆಪ್ಪುಡಿರ ಮನೆತನದವರು ಯಾತ್ರಾರ್ಥಿಗಳ ಸೌಕರ್ಯಕ್ಕಾಗಿ ಚಿಕ್ಕ ಕಟ್ಟಡಗಳನ್ನೂ, ಪಾವಟಿಗೆಗಳನ್ನೂ ಇತ್ತೀಚೆಗೆ ಕಟ್ಟಿಸಿರುವರು.

ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡಿದ ಬಳಿಕ ಯಾತ್ರಿಕರು ಭಾಗಮಂಡಲದಲ್ಲಿರುವ ದೇವಾಲಯವನ್ನು ಪ್ರವೇಶಿಸಬೇಕು. ಇಲ್ಲಿ ಶಿವ, ಸುಬ್ರಹ್ಮಣ್ಯ, ವಿಷ್ಣು ಮೊದಲಾದ ದೇವರ ಗುಡಿಗಳಿವೆ. ತ್ರಿವೇಣಿ ಸಂಗಮದಲ್ಲಿ ಮೃತರಾದ ಪಿತೃಗಳಿಗೆ ಪಿಂಡವನ್ನು ಅರ್ಪಿಸುವ ಪದ್ಧತಿಯಿದೆ.

ಕೊಡಗಿನ ಪಟ್ಟಣಗಳು: ಕೊಡಗಿನ ರಾಜಧಾನಿ ಮಡಿಕೇರಿಯನ್ನು ಬಿಟ್ಟರೆ ಮತ್ತೆ ನಗರಸಭೆಯಿರುವ ದೊಡ್ಡ ಪಟ್ಟಣವೆಂದರೆ ವಿರಾಜಪೇಟೆ. ಮೈಸೂರಿಗೆ ಬೆಂಗಳೂರು ಇದ್ದಂತೆ ಮಡಿಕೇರಿಗೆ ವಿರಾಜಪೇಟೆ. ರಾಜಧಾನಿಯು ಮಡಿಕೇರಿಯಾದರೂ ವ್ಯಾಪಾರ ವ್ಯವಹಾರಕೇಂದ್ರ ವಿರಾಜಪೇಟೆ. ಕೇರಳದ ತಲಚೇರಿ ಕಣ್ಣಾನ್ನೂರುಗಳಿಂದ ಮೈಸೂರಿಗೆ ಹೋಗಬೇಕಾದರೆ



ಕೊಡಗು ರಾಜರ ಸಮಾಧಿ—"ಗದ್ದುಗೆ"



ಕಾವೇರಿನದಿಯ ಉಗಮಸ್ಥಾನ--ತಲಕಾವೇರಿ.



ಓಂಕಾರೇಶ್ವರ ದೇವಸ್ಥಾನ, ಮಡಿಕೇರಿ.



ಮಡಿಕೇರಿಯ "ರಾಜಾ ಸೀಟ್"

ಈ ವಿರಾಜಪೇಟೆಯನ್ನು ಹಾದುಹೋಗಬೇಕು. ವಿರಾಜಪೇಟೆಯು ಮಡಿಕೇರಿಯುಷ್ಟು ಎತ್ತರದಲ್ಲಿಲ್ಲ. ದಕ್ಷಿಣಕೊಡಗಿನಲ್ಲಿ ವಿರಾಜಪೇಟೆಯೇ ದೊಡ್ಡ ಪಟ್ಟಣ. ಶಾಲೆ, ಹೈಸ್ಕೂಲು, ಆಸ್ಪತ್ರೆ, ಕ್ಲಬ್ ಮತ್ತಿತರ ಅನೇಕ ಆಧುನಿಕ ಸೌಲಭ್ಯಗಳಿಂದ ಕೂಡಿರುವ ಸುಂದರ ನಗರ. ಈಗಂತೂ ವಿದ್ಯುದ್ದೀಪಗಳ ಸೌಕರ್ಯವಿದೆ. ನಾಪೊಕ್ಲು, ಪೊನ್ನಂಪೇಟೆ, ಗೋಣಿಕೊಪ್ಪ, ಕುಶಾಲನಗರ, ಇವು ಇತರ ಪಟ್ಟಣಗಳು. ಸಿದ್ಧಾಪುರ ಮತ್ತು ಪೊಳಿಬೆಟ್ಟಗಳು ಕಾಫಿ ಕೇಂದ್ರಗಳು. ಕುಶಾಲ ನಗರದಿಂದ ಮೂರು ಮೈಲು ದೂರದಲ್ಲಿರುವ ಕೂಡಿಗೆಯಲ್ಲಿ ಸರಕಾರಿ ಬೇಸಿಕ್ ಟ್ರೈನಿಂಗ್ ಕಾಲೇಜು ಮತ್ತು ಮಾದರಿ ವ್ಯವಸಾಯ ಕ್ಷೇತ್ರವಿದೆ. ಮಡಿಕೇರಿಯಿಂದ ೧೨ ಮೈಲು ದೂರದ ಚೆಟ್ಟಳ್ಳಿ ಎಂಬಲ್ಲಿ ಕಿತ್ತಳೆ ಪರಿಶೋಧನಾ ಕ್ಷೇತ್ರವಿದೆ. ದಕ್ಷಿಣ ಕೊಡಗಿನ "ಇರ್ಪು" ಒಂದು ಯಾತ್ರಾ ಸ್ಥಳವಾಗಿದೆ.

ರಾಜಧಾನಿ ಮಡಿಕೇರಿ: ನಿರ್ಮಲವಾದ ಕೇರಿಗಳಿಂದ ಕೂಡಿರುವ ನಗರವಾದುದರಿಂದ ಈ ಪಟ್ಟಣವನ್ನು ಮಡಿಕೇರಿಯೆಂದು ಕರೆಯುವರು. ಮಡಿಕೇರಿಯು ಮಂಗಳೂರಿನಿಂದ ೮೪ ಮೈಲುಗಳ ಪೂರ್ವ ದಿಕ್ಕಿನಲ್ಲಿ, ಮೈಸೂರಿನಿಂದ ಸುಮಾರು ೭೪ ಮೈಲುಗಳ ಪಶ್ಚಿಮ ದಿಕ್ಕಿನಲ್ಲಿ, ಸಮುದ್ರ ಮಟ್ಟದಿಂದ ಸುಮಾರು ೩,೯೦೦ ಅಡಿಗಳಷ್ಟು ಉನ್ನತವಾದ ಪಶ್ಚಿಮ ಘಟ್ಟಗಳ ಬೆಟ್ಟಗಳೆರಡರ ತಪ್ಪಲಲ್ಲಿ ಚಾಚಿಕೊಂಡಿದೆ. ಬಸ್ಸು ಅಥವಾ ಗಾಡಿಗಳ ಮೂಲಕ ಮಾತ್ರ ಅಲ್ಲಿಗೆ ಹೋಗುವ ಸೌಕರ್ಯವಿದೆ. ಬೆಟ್ಟದ ಮೇಲಿರುವ ಬೆಟ್ಟದೂರು ಆಗಿರುವುದರಿಂದ ಮಡಿಕೇರಿಯಲ್ಲಿ ಏರುತಗ್ಗಾದ ಓರೆಕೋರೆಯಾದ ಬೀದಿಗಳನ್ನು ಕಾಣಬಹುದು. ಮಡಿಕೇರಿಯು ಪ್ರಾಂತ್ಯದ ಮುಖ್ಯ ಪಟ್ಟಣವಾಗಿದ್ದರೂ ಇಲ್ಲಿಯ ಜನಸಂಖ್ಯೆಯು ಕೇವಲ ಹನ್ನೆರಡು ಸಾವಿರವೆಂದರೆ ಹಲವರಿಗೆ ಆಶ್ಚರ್ಯವಾಗಬಹುದು.

ಬೆಡಗಿನ ಬೆಟ್ಟದೂರೂ ಹೌದು: ನೀಲಗಿರಿ ಜಿಲ್ಲೆಯ ಉದಕಮಂಡಲ, ಮಧುರೆ ಜಿಲ್ಲೆಯ ಕೊಡೈಕನಲ್‌ಗಳಂತೆ ಕೊಡಗಿನ ರಾಜಧಾನಿ ಮಡಿಕೇರಿ ನಗರವೂ ದಕ್ಷಿಣ ಭಾರತದ ಬೆಟ್ಟದೂರುಗಳಲ್ಲಿ ಒಂದು. ಆದರೆ ಇಲ್ಲಿ ಇತರ ಬೆಟ್ಟದೂರುಗಳಲ್ಲಿರುವಷ್ಟು ಪ್ರವಾಸೀ ಸೌಕರ್ಯಗಳಿಲ್ಲದಿರುವುದೊಂದು ಕೊರತೆ. ಮಡಿಕೇರಿಯನ್ನು ಸಂದರ್ಶಿಸಿದ ಅನೇಕ ಮಹನೀಯರೂ, ಧುರೀಣರೂ "ಮಡಿಕೇರಿಯನ್ನು ಒಂದು ಆಕರ್ಷಕ ಪ್ರವಾಸೀ

ಕೇಂದ್ರವನ್ನಾಗಿ ಪರಿವರ್ತಿಸಲನುವಿದೆ" ಎಂಬ ಸದಾಶಯವನ್ನು ಪ್ರಕಟಿಸಿದ್ದಾರೆ. ಮಡಿಕೇರಿ ನಗರಸಭೆ ಹಾಗೂ ಕೊಡಗು ಸರಕಾರವು ಆ ಕುರಿತು ವಿಶೇಷ ಗಮನವನ್ನು ಕೊಡುತ್ತಿದೆ.

ಕೋಟೆ—ಅರಮನೆ: ಮಡಿಕೇರಿಯನ್ನು ಸಂದರ್ಶಿಸುವ ಪ್ರವಾಸಿಗಳು ಕಾಣಲೇಬೇಕಾದ ಮುಖ್ಯ ಸ್ಥಳಗಳಲ್ಲಿ ಕೊಡಗಿನ ರಾಜರ ಕಾಲದ ಕೋಟೆ ಮತ್ತು ಅದರ ಮಧ್ಯದಲ್ಲಿರುವ ಅರಮನೆಯು ಐತಿಹಾಸಿಕ ದೃಷ್ಟಿಯಿಂದ ಬಹಳ ಪ್ರಾಮುಖ್ಯವಾದುವು. ಕೊಡಗು ಸರಕಾರದ ಸೆಕ್ರಿಟೇರಿಯಟ್ ಮತ್ತಿತರ ಕೋರ್ಟು ಕಛೇರಿಗಳೆಲ್ಲಾ ಈ ಕಟ್ಟಡದಲ್ಲಿಯೇ ತುಂಬಿಕೊಂಡಿವೆ. ಕೋಟೆಯ ಆವರಣದಲ್ಲಿ ವಿಶಾಲವಾದ ಅಂಗಣವಿದ್ದು ಒಂದು ಮೂಲೆಯಲ್ಲಿ ಪ್ರಾಚೀನ ಅರಸರ ಕಾಲದಲ್ಲಿನ ಗಾರೆಯಿಂದ ರಚಿಸಲ್ಪಟ್ಟ ಎರಡು ಬೃಹದಾಕಾರದ ಚಲೋ ಆನೆಗಳಿವೆ. ಇವುಗಳನ್ನು ಸರಕಾರದವರು ಕಾದಿಡಲ್ಪಟ್ಟ ಪ್ರಾಚ್ಯಸ್ಮಾರಕಗಳಾಗಿ ಪರಿಗಣಿಸಿದ್ದಾರೆ.

ಇತರ ಸ್ಥಳಗಳು: ಕೋಟೆಯನ್ನು ದಾಟಿ ಮುಂದುವರಿದರೆ ಮಡಿಕೇರಿಯ ಮುಖ್ಯವಾದ ಅಂಚೆಕಛೇರಿಯಿದೆ. ಕಛೇರಿಯೆದುರಿನ ರಾಜಬೀದಿಯಲ್ಲಿ ನಿಂತು ನೋಡಿದರೆ ಮಡಿಕೇರಿ ನಗರದ ಉತ್ತರ ಭಾಗದ ಮಹದೇವಪೇಟೆಯ ನಯನಮನೋಹರವಾದ ದೃಶ್ಯವನ್ನು ಕಾಣಬಹುದು. ಬೆಟ್ಟದ ತಪ್ಪಲಲ್ಲಿ ಸಾಲು ಸಾಲಾಗಿರುವ ಚಿಕ್ಕ ಚಿಕ್ಕ ಮನೆಗಳ ಮಾಡುಗಳನ್ನು ದೂರದಿಂದ ಮೊದಲ ಬಾರಿಗೆ ಕಂಡಾಗ ಬೆಂಕಿಪೆಟ್ಟಿಗೆಗಳನ್ನು ಒಂದಕ್ಕೊಂದು ಹೊಂದಿಸಿ ಸಾಲಾಗಿ ಇಟ್ಟಂತೆ ಭಾಸವಾಗುವುದು. ಮಹದೇವಪೇಟೆಯ ಕೊನೆಯಲ್ಲಿ ಕೊಡಗಿನ ರಾಜರ ಸಮಾಧಿಗಳಿವೆ. ಇವುಗಳನ್ನು "ಗದ್ದುಗೆ" ಎಂದು ಕರೆಯುತ್ತಾರೆ. ಕ್ರಿ. ಶ. ೧೮೦೯ರಲ್ಲಿ ಕೊಡಗಿನ ಲಿಂಗರಾಜನು ಕಾಲವಾದ ಬಳಿಕ ಅವನ ಪ್ರೀತಿಯ ಮಡದಿಯು ವಜ್ರವನ್ನು ಪುಡಿಮಾಡಿ ತಿಂದು ಆತ್ಮಹತ್ಯೆಮಾಡಿಕೊಂಡಳಂತೆ. ಅವರ ಮಗನಾದ ಚಿಕ್ಕ ವೀರರಾಜನು ಇಬ್ಬರ ಶರೀರಗಳನ್ನೂ ಸಮಾಧಿಗೊಳಿಸಿ ಆ ಸ್ಥಳದಲ್ಲಿ ಭವ್ಯವಾದ ಈ ಗೋರಿಯನ್ನು ನಿರ್ಮಿಸಿದನಂತೆ. ಈ ಗೋರಿಗಳೇ "ಗದ್ದುಗೆ"ಯೆಂದು ಕರೆಯಲ್ಪಡುವ ಸ್ಮಾರಕ ವಿಶೇಷಗಳು. ಗದ್ದುಗೆಯ ನಾಲ್ಕು ಮೂಲೆಗಳಲ್ಲಿಯೂ ಎತ್ತರವಾದ ಪೀಠದಲ್ಲಿ ಬಸವನ ವಿಗ್ರಹಗಳಿವೆ. ಗದ್ದುಗೆಯ ಮಾಡು ಗೋಲಾಕಾರವಾಗಿದ್ದು ದೂರದಿಂದ ದೇವಾಲಯದಂತೆ ಕಾಣುತ್ತದೆ.

ಓಂಕಾರೇಶ್ವರ ದೇವಸ್ಥಾನ: ಈ ಪ್ರಸಿದ್ಧ ದೇವಸ್ಥಾನವು ಈ ರಾಜ್ಯದ ಅತಿ ದೊಡ್ಡ ದೇವಾಲಯ. ಮಡಿಕೇರಿಯಲ್ಲಿದೆ. ಕೊಡಗಿನ ಅರಸ ಲಿಂಗರಾಜನು ಇದನ್ನು ಕಟ್ಟಿಸಿದನಂತೆ. ಲಿಂಗರಾಜನು ಓರ್ವ ಸಾತ್ವಿಕ ಬ್ರಾಹ್ಮಣನನ್ನು ಕೊಲ್ಲಿಸಿದನೆಂದೂ ಆ ಬ್ರಾಹ್ಮಣನು ಬ್ರಹ್ಮರಾಕ್ಷಸನಾಗಿ ರಾಜನಿಗೆ ಉಪದ್ರವವನ್ನುಂಟುಮಾಡಲು, ರಾಜನು ಪ್ರಾಯಶ್ಚಿತ್ತಕ್ಕಾಗಿ ಆ ಬ್ರಾಹ್ಮಣನ ಮನೆಯಿದ್ದ ಸ್ಥಳದಲ್ಲಿಯೇ ಈ ದೇವಸ್ಥಾನವನ್ನು ಕಟ್ಟಿಸಿ ಕಾಶೀಕ್ಷೇತ್ರದಿಂದ ಲಿಂಗವನ್ನು ತರಿಸಿ ಪ್ರತಿಷ್ಠಿಸಿದನೆಂದೂ ಪ್ರತೀತಿಯಿದೆ. ದೇವಾಲಯದ ಎದುರಲ್ಲಿ ಸುಂದರವಾದ ಹಾಗೂ ತಿಳಿನೀರಿನ ಒಂದು ಸರೋವರವಿದೆ. ಓಂಕಾರೇಶ್ವರ ದೇವಸ್ಥಾನದ ಸುತ್ತ ಮುತ್ತಲಿನ ತಗ್ಗಾದ ಪ್ರದೇಶಗಳಲ್ಲಿ ಹಲವು ಚಿಕ್ಕ ತೊರೆಗಳು ಹರಿಯುತ್ತವೆ. ಇಲ್ಲಿ ಹೆಚ್ಚಾಗಿ ಬ್ರಾಹ್ಮಣರ ಮನೆಗಳಿರುವುದರಿಂದ ಈ ಪ್ರದೇಶವನ್ನು "ಬ್ರಾಹ್ಮಣರ ಕಣಿವೆ" (Brahmin Valley) ಎಂದು ಕರೆಯುತ್ತಾರೆ.

ಪುರಭವನ: ಮಡಿಕೇರಿ ನಗರದ ಕಟ್ಟಡಗಳಲ್ಲಿ ೧೯೫೫ನೆಯ ನೂತನ ವರ್ಷದ ಮೊದಲ ದಿನದಂದು ಕೊಡಗಿನ ಗೃಹಮಂತ್ರಿ ಶ್ರೀ। ಕೆ. ಮಲ್ಲಪ್ಪನವರಿಂದ ಉದ್ಘಾಟಿಸಲ್ಪಟ್ಟ ಪುರಭವನವು ಒಂದು. ಮಡಿಕೇರಿಯಲ್ಲಿ ಜರಗುವ ಯಾವತ್ತೂ ಸಂಸ್ಕೃತಿ ಪ್ರಸಾರ ಕಾರ್ಯ, ಸಾರ್ವಜನಿಕ ಸಭೆ, ನೃತ್ಯ, ನಾಟಕಾದಿಗಳು ಇಲ್ಲಿಯೇ ಜರಗುತ್ತವೆ. ಈ ಭವನವನ್ನು ಹಾದು ಮುಂದೆ ಹೋದರೆ ರಾಜಬೀದಿಯ ಪಕ್ಕದಲ್ಲಿ, ಎರಡನೇ ಜಾಗತಿಕ ಯುದ್ಧದಲ್ಲಿ ಭಾಗಿಗಳಾಗಿ ವೀರಸ್ವರ್ಗವನ್ನು ಸೇರಿದ ಕೊಡಗಿನ ವೀರ ಯೋಧರ ಸ್ಮಾರಕವೊಂದನ್ನು ಕಾಣಬಹುದು.

ಕೇವಲ ೧೫೯೩ ಚದರ ಮೈಲುಗಳಷ್ಟು ಹಬ್ಬಿಕೊಂಡು ಕೇವಲ ಎರಡು ಲಕ್ಷ ಜನಸಂಖ್ಯೆಯಿರುವ ಕೊಡಗು ನಾಡು ನಮ್ಮ ಭಾರತದೇಶದ ಸೈನ್ಯ ಇಲಾಖೆಗೆ ಸುಮಾರು ೬೦೦೦ಕ್ಕಿಂತಲೂ ಹೆಚ್ಚು ವೀರ ಯೋಧರನ್ನು ಕೊಟ್ಟಿದೆಯೆಂದರೆ ಯಾರಿಗೆ ತಾನೇ ಆಶ್ಚರ್ಯ ಹಾಗೂ ಸಂತೋಷ ವಾಗದಿರದು?

ಶಾಲೆ-ಕೋಲೆಜು: ನಗರದಿಂದ ಸುಮಾರು ೧॥ ಮೈಲು ದೂರದಲ್ಲಿ ಸರಕಾರಿ ಕೋಲೆಜಿನ ಭವ್ಯಕಟ್ಟಡವಿದೆ. ಈ ಕೊಲೇಜು ಕಟ್ಟಡದ ನಿರ್ಮಾಣಕ್ಕೆ ೭,೪೬,೨೧೯ ರೂಪಾಯಿಗಳಷ್ಟು ವೆಚ್ಚವಾಗಿದ್ದು, ಇದು

ಕೊಡಗು ಪ್ರಾಂತ್ಯದಲ್ಲಿ ಕಾಲೇಜು ಶಿಕ್ಷಣವನ್ನೀಯುವ ಏಕಮಾತ್ರ ಸಂಸ್ಥೆಯಾಗಿದೆ. ಮಡಿಕೇರಿಯ ಬಸ್‌ನಿಲ್ದಾಣದಿಂದ ಒಂದೂವರೆ ಫರ್ಲಾಂಗು ದೂರದಲ್ಲಿ ಕೊಡಗು ಸಂಸ್ಥಾನದಲ್ಲಿ ಮೊದಲನೆಯದಾಗಿ ಕ್ರಿ. ಶ. ೧೮೭೦ರಲ್ಲಿ ಸ್ಥಾಪಿಸಲ್ಪಟ್ಟ ಸೆಂಟ್ರಲ್ ಹೈಸ್ಕೂಲಿನ ಕಟ್ಟಡಗಳಿವೆ. ಸಂಯುಕ್ತರಾಷ್ಟ್ರ ಸಂಘದ ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಂಗಸಂಸ್ಥೆಯಾದ "ಯುನೆಸ್ಕೊ"(UNESCO)ವು ವಿದ್ಯಾರ್ಥಿಗಳನ್ನು ಅಂತರರಾಷ್ಟ್ರೀಯ ಪ್ರಜೆಗಳನ್ನಾಗಿ ತರಬೇತಿಗೊಳಿಸುವುದಕ್ಕೆ ನಮ್ಮ ಭಾರತ ದೇಶದಿಂದ ಆರಿಸಿದ ಆರು ಹೈಸ್ಕೂಲುಗಳಲ್ಲಿ ಮಡಿಕೇರಿಯ ಸೆಂಟ್ರಲ್ ಹೈಸ್ಕೂಲು ಒಂದಾಗಿದೆ. ವಿವಿಧೋದ್ದೇಶ ಶಾಲೆಯಾಗಿ ಪರಿವರ್ತಿಸಲ್ಪಟ್ಟಿದೆ.

'ರಾಜಾಸೀಟ್': ಮಡಿಕೇರಿ ನಗರದಲ್ಲಿ ನಿಸರ್ಗ ಸೌಂದರ್ಯದ ಪರಮಾವಧಿಯನ್ನು ಆಸ್ವಾದಿಸಬೇಕಾದರೆ "ರಾಜಾಸೀಟ್" ಎಂದು ಕರೆಯಲ್ಪಡುವ ಉನ್ನತವಾದ ಸ್ಥಳಕ್ಕೆ ಹೋಗಿ ನೋಡಬೇಕು ಕೊಡಗಿನ ರಾಜರು ಈ ಉನ್ನತವಾದ ಸ್ಥಳವನ್ನು ಗುರುತಿಸಿ ಅಲ್ಲೊಂದು ಚಿಕ್ಕ ಮಂಟಪವನ್ನು ಕಟ್ಟಿಸಿದ್ದು ಅದನ್ನು ನಾವು ಈಗಲೂ ಕಾಣಬಹುದು. ಕ್ರಿ. ಶ. ೧೯೩೪ರಲ್ಲಿ ಮಹಾತ್ಮಾಗಾಂಧೀಜಿಯವರು ಕೊಡಗಿಗೆ ಸಂದರ್ಶನವಿತ್ತಿದ್ದಾಗ ಈ ನಯನ ಮನೋಹರವಾದ ಪ್ರಕೃತಿಸೌಂದರ್ಯವನ್ನು ನೋಡಿ ಆನಂದಗೊಂಡು ತಮ್ಮ "ಹರಿಜನ" ಪತ್ರಿಕೆಯಲ್ಲಿ "ಜಗತ್ತಿನಲ್ಲಿ ಅನೇಕ ಸುಂದರ ದೃಶ್ಯಗಳನ್ನು ನಾನು ನೋಡಿದ್ದೇನೆ. ಆದರೆ ಮಡಿಕೇರಿಯ ರಾಜಾಸೀಟಿನಲ್ಲಿ ಪ್ರಕೃತಿದೇವಿ ಶೃಂಗಾರಗೊಂಡು ಒಲಿದುನಿಂತು, ಭೂಸ್ವರ್ಗವನ್ನು ನಿರ್ಮಿಸಿದ್ದಾಳೆ'' ಎಂದು ಬರೆದಿದ್ದರು. ಪುರಜನರು ಈ ಸ್ಥಳಕ್ಕೆ ನಿತ್ಯವೂ ವಿಹಾರಾರ್ಥ ಬಂದು ಹೋಗುತ್ತಾರೆ.

ಗಾಂಧೀ ಸ್ಮಾರಕ ಮಂಟಪ: ರಾಜಾಸೀಟಿಗೆ ಹೋಗುವ ಮಾರ್ಗದ ಪಕ್ಕದಲ್ಲಿ, ಸೈಂಟ್ ಮೈಕೇಲ್ ಹೈಸ್ಕೂಲಿನ ಮುಂದಿನ ಮೈದಾನಿನಲ್ಲಿ ಸುಮಾರು ೩೦,೦೦೦ ರೂಪಾಯಿಗಳ ವೆಚ್ಚದಿಂದ ಕಟ್ಟಿಸಿದ ಭವ್ಯವಾದ ಗಾಂಧಿಜಿಯ ಸ್ಮಾರಕ ಮಂಟಪವನ್ನು ೧೯೫೫ನೇ ಎಪ್ರಿಲ್ ೨ರಂದು ಕೇಂದ್ರ ಸರಕಾರದ ಗೃಹಖಾತೆಯ ಮಂತ್ರಿ ಶ್ರೀ ಬಳವಂತ ರಾವ್ ನಾಗೇಶ ರಾವ್ ದಾತಾರರವರು ಉದ್ಘಾಟಿಸಿದರು. ಕ್ರಿ. ಶ. ೧೯೩೪ರಲ್ಲಿ ಕೊಡಗಿಗೆ ಬಾಪೂಜಿ ಬಂದಿದ್ದಾಗ, ಸಾರ್ವಜನಿಕ ಸಭೆಯೊಂದನ್ನುದ್ದೇಶಿಸಿ ಬಾಪೂಜಿ

ಭಾಷಣ ಮಾಡಿದ ಸ್ಥಳದಲ್ಲಿಯೇ ಈ ಸ್ಮಾರಕ ಮಂಟಪವು ರೂಪುಗೊಂಡಿದೆ. ಕೊಡಗು ಸರಕಾರದ ಖಜಾನೆಯಲ್ಲಿದ್ದ ಗಾಂಧೀಜಿಯವರ ಪವಿತ್ರ ಚಿತಾ ಭಸ್ಮವನ್ನು ಈ ಮಂಟಪದಲ್ಲಿ ರಚಿಸಲಾಗಿದೆ.

ಸುದರ್ಶನ: ಕೊಡಗಿನ ಚೀಫ್ ಕಮಿಶನರರ ನಿವಾಸಭವನವನ್ನು ಈಗ "ಸುದರ್ಶನ" ಎಂದು ಕರೆಯುತ್ತಾರೆ. ಮೊದಲು "ಬೋರ್ ಬಂಗ್ಲೆ" ಎಂದು ಕರೆಯುತ್ತಿದ್ದರಂತೆ. ಈ ಸ್ಥಳದಿಂದ ಮಡಿಕೇರಿ ನಗರದ ವಿಹಂಗಮ ನೋಟವನ್ನು ನೋಡಬಹುದು. ಮಡಿಕೇರಿ ನಗರದಿಂದ ಪೂರ್ವದಿಕ್ಕಿಗೆ ಈ ಭವ್ಯ ಸುಂದರ ನಿಲಯವಿದೆ.

ಹುತ್ತರಿಹಬ್ಬ: ಕೊಡಗಿನ ಹಬ್ಬಗಳಲ್ಲಿ ಅತಿ ಮುಖ್ಯವಾದುದು ಹುತ್ತರಿಹಬ್ಬ. ಇದನ್ನು ಕೊಡಗಿನ ರಾಷ್ಟ್ರೀಯಹಬ್ಬವೆಂದರೂ ಸಲ್ಲುವುದು. ಕೊಡಗಿನಲ್ಲಿ ನೆಲೆನಿಂತಿರುವ ಪ್ರತಿಯೊಬ್ಬರೂ ಇದನ್ನು ಒಂದಲ್ಲ ಒಂದು ರೀತಿಯಲ್ಲಿ ಆಚರಿಸಿಯೇ ತೀರುತ್ತಾರೆ. ಆದರೆ ಕೊಡಗು ಇದನ್ನು ಆಚರಿಸುವ ರೀತಿನೀತಿಗಳು ವಿಶಿಷ್ಟವಾಗಿವೆ. ಸಾಮಾನ್ಯವಾಗಿ ನವೆಂಬರ ಅಥವಾ ದಶಂಬರದಲ್ಲಿ ಈ ಹಬ್ಬವು ಜರಗುವುದು. ಜನರು ವರ್ಷದ ಶ್ರಮದ ಫಲವಾಗಿ ಅಗ್ನಿದೇವತೆಯಾದ ಲಕ್ಷ್ಮಿದೇವಿಯನ್ನು ಪೂಜಿಸಿ ತಮ್ಮ ತಮ್ಮ ಮನೆಗಳಿಗೆ ಭಕ್ತಿಯಿಂದ ಸ್ವಾಗತಿಸಿ ಕರೆದುಕೊಂಡು ಬರುವುದೇ ಈ ಹುತ್ತರಿ ಹಬ್ಬದ ವೈಶಿಷ್ಟ್ಯ. ಹಬ್ಬದ ಒಂದು ತಿಂಗಳ ಮೊದಲೇ ಜನರು ಸಿದ್ಧತೆಗಳಲ್ಲಿ ತೊಡಗುತ್ತಾರೆ. ಪ್ರತಿಯೊಂದು ಮನೆಯನ್ನೂ ತೊಳೆದು, ಸಾರಿಸಿ ಸುಣ್ಣದ ನೀರಿನ ಬಿಳಿಯ ಬಣ್ಣದಿಂದ ಮನೆಯನ್ನು ಅಲಂಕರಿಸುತ್ತಾರೆ. ಜನರು ಹೊಸ ಉಡುಗೆಗಳಿಂದಲಂಕರಿಸಿಕೊಳ್ಳುತ್ತಾರೆ. ಮನೆಯ ಬಾಗಿಲು, ಕಿಟಕಿ ಕಂಬಗಳು ಅಕ್ಕಿಯ ಪುಡಿಯಿಂದ ರಚಿಸಲಾದ ರಂಗವಲ್ಲಿ, ನಕ್ಷತ್ರಗಳಿಂದ ಅಲಂಕರಿಸಲ್ಪಡುತ್ತವೆ. ಹಬ್ಬದ ದಿನ ನಿಶ್ಚಿತಕಾಲದಲ್ಲಿ "ನೆರೆ ಕಟ್ಟುವೊ'' ಎಂಬ ಮೊತ್ತ ಮೊದಲಿನ ಸಂಸ್ಕಾರವು ನೆರವೇರುತ್ತದೆ. ಒಂದು ನಿರ್ದಿಷ್ಟವಾದ ಜಾತಿಯ ಮರಗಳ ಎಲೆ ಮತ್ತು ನಾರುಗಳನ್ನು ಮಡಚಿ ಒಟ್ಟು ಸೇರಿಸಿ ಕಟ್ಟುವರು. ಈ ಕಾರ್ಯಕಲಾಪಗಳಲ್ಲಿ ಮನೆಯ ಯಜಮಾನ ಅಥವಾ ಹಿರಿಯರಿಗೆ ಮುಖ್ಯವಾದ ಪಾತ್ರವಿರುತ್ತದೆ. ಬಳಿಕ ಕುಟುಂಬದ ಸಕಲರೂ ಸೇರಿ "ಪುತ್ತರಿ ಕಳಂಜಿ'' ಎಂಬ ಒಂದು ವಿಧದ ಬೇಯಿಸಿದ ಗೆಣಸು, ಹುರಿದ ಅಕ್ಕಿಯ ಪುಡಿಯೊಂದಿಗೆ ಬಾಳೆಯಹಣ್ಣನ್ನು ಕಲಸಿ

ಮಾಡಿದ "ತಂಬಿಟ್ಟು'' ಎಂಬ ವಿಶಿಷ್ಟವಾದ ತಿಂಡಿಯಿಂದ ಕೂಡಿದ ಉಪಾಹಾರವನ್ನು ಸೇವಿಸುತ್ತಾರೆ.

ಹುತ್ತರಿಹಬ್ಬದ ಮುಖ್ಯವಾದ ಕಾರ್ಯಕ್ರಮವೆಂದರೆ ಕದಿರುಗಳಿಂದ ಕಂಗೊಳಿಸುತ್ತಿರುವ ಭತ್ತದ ಗದ್ದೆಗಳಿಂದ ತೆನೆಗಳನ್ನು ಮನೆಗೆ ತರುವುದೇ ಆಗಿದೆ. ಮನೆಯ ಪ್ರಾರ್ಥನಾ ಕೇಂದ್ರವಾದ "ನೆಲ್ಲಕ್ಕಿ ಬಾಡೆ''ಯಲ್ಲಿ ಮೊದಲು ತಮ್ಮ ಕುಲದೇವರನ್ನು ಪ್ರಾರ್ಥಿಸಿ, ಸಕಲರೂ ಒಟ್ಟಾಗಿ ಭತ್ತದ ಗದ್ದೆಗಳಿಗೆ ಹೋಗುತ್ತಾರೆ. ಮಣ್ಣಿನ ಹಣತೆ, ಅಕ್ಕಿ, ವೀಳ್ಯದೆಲೆ, ಅಡಿಕೆ, ತೆಂಗಿನ ಕಾಯಿ ಮುಂತಾದವುಗಳನ್ನೊಳಗೊಂಡ "ಕಚ್ಚಿತಳಿಯ'' ಎಂದು ಕರೆಯಲ್ಪಡುವ ಕಂಚಿನ ಪಾತ್ರೆಯೊಂದನ್ನು ಕೈಯಲ್ಲಿ ಹಿಡಿದುಕೊಂಡು ಕನ್ಯೆಯೊಬ್ಬಳು ಮುಂದೆ ಸಾಗುತ್ತಾಳೆ. ಉಳಿದವರು ಹಿಂಬಾಲಿಸುತ್ತಾರೆ. ಕುಟುಂಬದ ಹಿರಿಯರೊಬ್ಬರು ಒಂದು ಕುಯಿಲುಗತ್ತಿ, ಸ್ವಲ್ಪ ಹುತ್ತರಿಗೆಣಸು, ಹಾಲು, ಜೇನು ಮೊದಲಾದವುಗಳನ್ನೊಳಗೊಂಡ ಬಿದಿರಿನ ಧಾರಕವೊಂದನ್ನು ಹಿಡಿದುಕೊಳ್ಳುತ್ತಾರೆ. ಭತ್ತದ ಗದ್ದೆಯನ್ನು ಮುಟ್ಟಿದೊಡನೆ ಧಾನ್ಯದೇವತೆಯನ್ನು ಪ್ರಾರ್ಥಿಸಿ ಹಾಲು, ಜೇನು, ಗೆಣಸುಗಳನ್ನು ಅವಳಿಗೆ ಸಮರ್ಪಿಸಿ, ಭಕ್ತಿಯಿಂದ, ಕದಿರನ್ನು ಕೊಯ್ಯತಕ್ಕ ಹಿರಿಯನು ಪೂಜಿಸುತ್ತಾನೆ. ಸಕಲರೂ ಏಕಕಂಠದಿಂದ "ಪೊಲಿ ಪೊಲಿ ದೇವಾ" (ಅನ್ನದೇವತೆಯೇ, ಪ್ರವರ್ಧಮಾನಳಾಗು) ಎಂದು ಬೊಬ್ಬಿಡುತ್ತಾರೆ. ಈ ಸುಮುಹೂರ್ತಕ್ಕೆ ಸರಿಯಾಗಿ ವಿಜಯೋತ್ಸಾಹಗಳ ಸೂಚಕವಾಗಿ ಗುಂಡುಗಳೂ ಹಾರಿಸಲ್ಪಡುತ್ತವೆ. ಆ ಮೇಲೆ ಸರ್ವರೂ ಭತ್ತದ ತೆನೆಗಳನ್ನು ಕೈಯಲ್ಲಿ ಹಿಡಿದುಕೊಂಡು ಸಾಂಪ್ರದಾಯಿಕವಾದ ಪ್ರಾರ್ಥನೆಗಳನ್ನು ಹಾಡುತ್ತಾ ಮನೆಗೆ ಮರಳುತ್ತಾರೆ. ಕೊಂಬು, ಕಹಳೆಗಳೂ ಸ್ಥಳೀಯ ವಾದ್ಯಗಳೂ ಮೊಳಗುತ್ತವೆ. ಮಕ್ಕಳು ದುರುಸು, ಬಾಣಗಳನ್ನು ಹಾರಿಸಿ ಸಂತೋಷದಿಂದ ನಲಿಯುತ್ತಾರೆ.

ಪಿತೃಪೂಜೆ: ಕೊಡಗರು ತಮ್ಮ ಗತಿಸಿದ ಹಿರಿಯರನ್ನೂ ಪಿತೃಗಗಳನ್ನೂ ಪೂಜಿಸುತ್ತಾರೆ. ವಿಜೃಂಭಣೆಯಿಂದ ಹೊಸ ಕದಿರನ್ನು ತರುವಾಗ ದಾರಿಯಲ್ಲಿ ತಮ್ಮ ಸ್ವರ್ಗವಾಸಿಗಳಾದ ಪಿತೃಗಳನ್ನು ಪೂಜಿಸುವ "ಕೈಮಡ" ಎಂಬ ಕೌಟುಂಬಿಕ ಆರಾಧನಾ ಮಂದಿರದಲ್ಲಿ ಹಿರಿಯರಿಗೆ ಪೂಜೆಯನ್ನು ಸಲ್ಲಿಸುತ್ತಾರೆ. ಮನೆಗೆ ಮರಳಿದ ಬಳಿಕ ಭತ್ತದ ತೆನೆಗ

ಳನ್ನು ಕತ್ತರಿಸಿದ ಹಿರಿಯನಿಗೆ ವಿಶೇಷವಾದ ಉಪಚಾರಗಳಾಗುತ್ತವೆ. ಮನೆಯ ಹೆಂಗಳೆಯರಲ್ಲಿ ಒಬ್ಬಳು ಅವನ ಪಾದಗಳನ್ನು ನೀರಿನಿಂದ ತೊಳೆದು, ಕುಡಿಯಲು ಹಾಲನ್ನು ಕೊಡುತ್ತಾಳೆ. ಗದ್ದೆಯಿಂದ ಸಂಭ್ರಮ ದಿಂದ ತಂದ ತೆನೆಯ ಗೊಂಚಲುಗಳನ್ನು ಮನೆಯ "ನೆಲ್ಲಕ್ಕಿ ಬಾಡೆ"ಯಲ್ಲಿ ತೂಗುದೀಪದ ಕೆಳಗೆ ಇರಿಸಲಾಗುವುದು. ಅನಂತರ ತೆನೆಗಳನ್ನು ಕೆಲವು ನಾರು, ಎಲೆಗಳೊಂದಿಗೆ ಪೋಣಿಸಿ ಮನೆಯ ಬಾಗಿಲು, ಕಿಟಕಿ, ಉಗ್ರಾಣ, ಬಾವಿ, ಹಟ್ಟಿ ಕೊಟ್ಟಿಗೆಗಳಿಗೆ ಕಟ್ಟುತ್ತಾರೆ.

ಹುತ್ತರಿ ಹಬ್ಬದ ಮುಂದಿನ ಕಾರ್ಯಕಲಾಪಗಳು ವಿನೋದಾತ್ಮಕ ವಾದ ನರ್ತನ, ಕುಣಿತಗಳಿಂದ ಕೂಡಿದ್ದು ಸಾಧಾರಣವಾಗಿ ಒಂದು ವಾರದ ವರೆಗೂ ನಡೆಯುತ್ತಿರುತ್ತವೆ. ಗ್ರಾಮಗಳ ಮತ್ತು ನಾಡುಗಳ ಜನರು "ಮಂದ್" ಎಂಬ ನಿರ್ದಿಷ್ಟವಾದ ಆಟೋಟಗಳ ಕೇಂದ್ರದಲ್ಲಿ ಒಟ್ಟುಕೂಡಿ ಸ್ಥಳೀಯ ವಾದ್ಯ, ಕಹಳೆ, ಡೋಲುಗಳ ಘೋಷಗಳೊಂದಿಗೆ ಸಾಮೂಹಿಕ ಜಾನಪದ ಕುಣಿತ, ನೃತ್ಯ, ಹಾಡುಗಾರಿಕೆ ಮುಂತಾದ ವಿನೋದಗಳನ್ನು ಪ್ರದರ್ಶಿಸುತ್ತಾರೆ. ಸಾಮಾನ್ಯವಾಗಿ ಪುರುಷರೆಲ್ಲರೂ ಮಿರುಗಿನ ಅಂಚುಳ್ಳ ರುಮಾಲನ್ನು ತಲೆಗೆ ಸುತ್ತಿಕೊಳ್ಳುತ್ತಾರೆ. ಮೈಮೇಲೆ ಕಪ್ಪುಬಣ್ಣದ ಅಡ್ಡವಾದ "ಕುಪ್ಪಸ"ವೆಂಬ ಮೇಲುಕೋಟನ್ನು ಧರಿಸಿಕೊಂಡು ಸೊಂಟಕ್ಕೆ ಕೆಂಪುಬಣ್ಣದ ಬೆಲೆಬಾಳುವ ನಡುದಟ್ಟಿಯನ್ನು ಕಟ್ಟಿಕೊಂಡು, ಮುಂಭಾಗ ದಲ್ಲಿ ಬಲಗಡೆ ಒರೆಯಲ್ಲಿರಿಸಿದ "ಪೀಚೆಗತ್ತಿ" ಎಂಬ ಚಿಕ್ಕ ಖಡ್ಗವನ್ನು ಸಿಕ್ಕಿಸಿಕೊಳ್ಳುತ್ತಾರೆ. ಇದು ಕೊಡಗರ ರಾಷ್ಟ್ರೀಯ ಉಡುಪು. ಮದುವೆಯೇ ಮೊದಲಾದ ಅವರ ಸಮಾರಂಭಗಳಿಗೆ ಹೋಗುವಾಗ ಎಲ್ಲರೂ ಈ ಉಡು ಪನ್ನು ಧರಿಸಿಯೇ ಹೋಗುತ್ತಾರೆ. ರಾಷ್ಟ್ರೀಯ ಉಡುಪನ್ನು ಧರಿಸಿದ ನೂರಾರು ಕೊಡಗರ ನೃತ್ಯ ಮತ್ತು ಕುಣಿತಗಳು ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತವೆ.

ಜಾನಪದ ಕುಣಿತ: ಕೊಡಗಿನಲ್ಲಿ ಪ್ರಖ್ಯಾತವಾದ ಜಾನಪದ ನೃತ್ಯಗಳ ಪ್ರದರ್ಶನ ಕೇಂದ್ರಗಳೆಂದರೆ ವೀರರಾಜ ಪೇಟೆಯ ಪೂಮಾಲೆ ಮಂದ್, ಮಡಿಕೇರಿಯ ಬಳಿಯ ಉರುಳಿಯಂಬಲ ಕೋಲುಬಾಣೆ, ಮಡಿ ಕೇರಿಯ ಗದ್ದುಗೆ ಕೋಲು ಮತ್ತು ದಕ್ಷಿಣ ಕೊಡಗಿನಲ್ಲಿ ಪ್ರಖ್ಯಾತಿಹೊಂದಿದ ಕೈಮುಡಿಕ ಮಂದ್. ಕೊಡಗರ ಜಾನಪದ ನೃತ್ಯಗಳು ಉತ್ತಮ ದರ್ಜೆಗೆ

ಸೇರಿದವುಗಳಾಗಿದ್ದು ಇವುಗಳಲ್ಲಿ ಅನೇಕ ವಿಧಗಳಿವೆ. ಅವುಗಳಲ್ಲಿ ಮುಖ್ಯ ವಾದುದು ಎರಡೂ ಕೈಯಲ್ಲಿ ಬೆತ್ತದ ಕೋಲುಗಳನ್ನು ಹಿಡಿದುಕೊಂಡು ವಿವಿಧ ರೀತಿ ಮತ್ತು ವಿವಿಧ ಭಂಗಿಗಳಲ್ಲಿ ಬೀಸುತ್ತಾ ಕುಣಿಯುವ ಕೋಲಾಟ ವಾಗಿದೆ. ಈ ಕೋಲಾಟದಿಂದಾಗಿ ಇವುಗಳನ್ನು ಪ್ರದರ್ಶಿಸುವ ಕೇಂದ್ರ ಗಳು "ಕೋಲ್‌ಮಂದ್" ಎಂದೂ ಕರೆಯಲ್ಪಡುತ್ತಿವೆ. ಒಂದು ಗ್ರಾಮದ ಜನರು ಸೇರುವ ಈ ಆಟೋಟಗಳ ಕೇಂದ್ರವನ್ನು "ಊರು ಮಂದ್" ಎಂದೂ ಅಂಥಹ ಅನೇಕ ಗ್ರಾಮಗಳ ಅಥವಾ ಒಂದು ನಾಡಿನ ಜನರು ಸೇರುವ ಕೇಂದ್ರವನ್ನು "ನಾಡು ಮಂದ್" ಎಂದೂ ಕರೆಯುತ್ತಾರೆ.

ಪರಿಯಕಳಿ— ಕದನ ನೃತ್ಯ: ಪರಿಯಕಳಿ ಎನ್ನುವ ಕದನ ನೃತ್ಯವು ಕೊಡಗರಲ್ಲಿ ಬಳಕೆಯಲ್ಲಿರುವ ಇನ್ನೊಂದು ನೃತ್ಯ ವಿಶೇಷ. ವೀರರಾದಂಥ ಇಬ್ಬರು ಒಂದು ರೀತಿಯ ದ್ವಂದ್ವಯುದ್ಧದ ಅಣಕವಾಟವನ್ನಾಡುತ್ತಾರೆ. ಕೊಡಗರ ಕ್ಷಾತ್ರತೇಜವನ್ನು ವ್ಯಕ್ತಪಡಿಸುವ ವಿನೋದದ ನೃತ್ಯವಿದು. ಸಮಾನ ವಯಸ್ಕರಾದ ಇಬ್ಬರು ತರುಣರು ಬೆತ್ತದಕೋಲು ಮತ್ತು ಗುರಾಣಿಗಳನ್ನು ಹಿಡಿದುಕೊಂಡು ಪರಸ್ಪರ ಕಾದಾಡಿ ನೆರೆದ ಜನರೆದುರು ತಮ್ಮ ಶೌರ್ಯ, ಸಾಮರ್ಥ್ಯಗಳನ್ನು ಪ್ರದರ್ಶಿಸುತ್ತಾರೆ. ಈ ಕದನ ನೃತ್ಯದ ಕೊನೆಗೆ ಇಬ್ಬರೂ ಪರಸ್ಪರರನ್ನು ಸಂತೋಷದಿಂದ ಆಲಿಂಗಿಸಿ, ಬಳಿಕ ಅಗಲುತ್ತಾರೆ. ಕೊಡಗಿನ ಸಂತಸದ ಸುಗ್ಗಿಯ ಹಬ್ಬ ಹುತ್ತರಿಯು ಕೊಡವರ ಪ್ರಾಚೀನ ಸಂಸ್ಕೃತಿಯ ಪರಂಪರೆ ಮತ್ತು ವೀರ ಸಂಪ್ರದಾಯ ಗಳನ್ನು ವ್ಯಕ್ತಪಡಿಸುವ ಒಂದು ವೈಶಿಷ್ಟ್ಯಪೂರ್ಣವಾದ ಹಬ್ಬ ವಾಗಿರುತ್ತದೆ.

ಕೊನೆಯದಾಗಿ: ಕೊಡಗರ ಆದರಾತಿಥ್ಯವನ್ನು ಅನುಭವಿಸಿಯೇ ತಿಳಿಯಬೇಕು. ಅವರ ಮನೆಗಳು ಅಚ್ಚುಕಟ್ಟಾಗಿದ್ದು ಅವರ ಭೂಮಿ ಮತ್ತು ಕಾಫಿ ತೋಟಗಳ ಮಧ್ಯದಲ್ಲಿರುತ್ತವೆ. ಮನೆಗೆ ಅತಿಥಿಗಳು ಬಂದರೆ ಎಲ್ಲರೂ ಸಂತೋಷಪಡುತ್ತಾರೆ. ಕೊಡಗರ ಶಿಷ್ಟಾಚಾರ ಸಂಪ್ರದಾಯಗಳು ಬಹುಭಿನ್ನವಾಗಿದ್ದು "ಭಾರತೀಯ ಸಂಸ್ಕೃತಿ"ಗೆ ಇವರ ಸಾಂಸ್ಕೃತಿಕ ಕಾಣಿಕೆಯು ವಿಶೇಷ ಮಹತ್ವಪೂರಿತವಾದುದು.

ಕೊಡಗಿನ ವೀರಯೋಧರ ಕುರಿತು ಹೇಳದಿದ್ದರೆ, ಈ ಪಹಿಯು ಅಪೂರ್ಣವೇ ಸೈ. ಭಾರತದ ಪ್ರಥಮ ಸರ್ವಸೇನಾಧಿಪತಿ (C–in–C)

ಸ್ಥಾನವನ್ನೇರಿದವರು ಕೊಡಗಿನವರಾದ ಕೊಡಂದೇರ ಯಂ. ಕಾರ್ಯಪ್ಪನವರು. ಇವರೀಗ ನಿವೃತ್ತರಾಗಿದ್ದರೂ ಆಸ್ಟ್ರೇಲಿಯದಲ್ಲಿ ಭಾರತದ ರಾಯಭಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಜನರಲ್ ತಿಮ್ಮಯ್ಯನವರಂತೂ ಈಗ ನಮ್ಮ ದೇಶದಲ್ಲಿ ಮಾತ್ರವಲ್ಲದೆ ವಿಶ್ವದಲ್ಲೆ ವಿಖ್ಯಾತರಾಗಿದ್ದಾರೆ ಎಂದರೂ ಅತಿಶಯೋಕ್ತಿಯಾಗಲಾರದು.

ಕೊಡಗಿನ ವೀರಯೋಧರಿಂದಾಗಿಯೇ ಕೊಡಗು ಇಷ್ಟು ಪುಟ್ಟ ನಾಡಾಗಿದ್ದರೂ ವಿಶ್ವವಿಖ್ಯಾತವಾಗಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಈ ವರೆಗೆ ತನ್ನ ಸಂಸ್ಕೃತಿಯನ್ನು ಕಾಯ್ದುಕೊಂಡು ಬಂದಿರುವ ಸುಂದರ ನಾಡು ಕೊಡಗಿಗೆ, ಸದ್ಯದಲ್ಲೆ ನಿರ್ಮಾಣವಾಗುವ ಕನ್ನಡನಾಡಿನಲ್ಲಿ ಉಜ್ವಲವಾದ ಭವಿಷ್ಯವಿದೆಯೆನ್ನುವುದರಲ್ಲಿ ಸಂದೇಹವಿಲ್ಲ.

॥ ಸಿರಿಗನ್ನಡಂಗೆಲ್ಗೆ ॥



ಕೊಡಗರು— ರಾಷ್ಟ್ರೀಯ ಉಡುಪಿನಲ್ಲಿ.

Edited, Printed & Published by K. V. Shenoy
at The Prabhat Printers, Ltd., Mangalore.